ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಅವರು ಕೇಳಿದ್ದು 80 ವರ್ಷದ ಮೇಲೆ ಇರುವವರಿಗೆ ಕೊಡಿ ಎಂದು. ನಾನು ಏನೆಂದೆ ಅಂದರೆ 80 ವರ್ಷ ವಯಸ್ಸಿನವರಿಗೆ ಕೊಟ್ಟರೆ ಬೇರೆಯವರು ಬಂದು ಕೇಳುತ್ತಾರೆ. ಅದಕ್ಕೆ ಒಂದು ವಯಸ್ಸು ನಿಗದಿ ಮಾಡಿ 75ಕ್ಕೆ ಮಾಡುತ್ತೇನೆಂದು ನಾನೇ 5 ವರ್ಷ ಕಡಿಮೆ ಮಾಡಿ ಮಾಡಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಇಷ್ಟೆಲ್ಲಾ ಮಾಡಿದವರು ಅದನ್ನು ತೆಗೆದುಬಿಡಿ ದೊಡ್ಡ ನಷ್ಟವೇನೂ ಆಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೋಡಿ, ಆದಾದರೆ ಏನಾಗುತ್ತದೆಂದರೆ, ಗೋವ ಫ್ರೀಡಂ ಫೈಟರ್, ಅವರು ಇವರೆಂದು ಈಗಾಗಲೇ ದೊಡ್ಡ ಕಾಂಟ್ರವರ್ಸಿಯಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಇದನ್ನು ಕೇವಲ ಸ್ವಾತಂತ್ರ್ಯ ಯೋಧರಿಗೆ ಮಾಡಿದ್ದು, ಅದರಲ್ಲಿ ನಾವು ಕೇಳುತ್ತಿರುವುದು . . . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಗೋವ ವಿಮೋಚನಾ ಹೋರಾಟದಲ್ಲಿ ಭಾಗವಹಿಸಿದವರು ಸ್ವಾತಂತ್ರ್ಯ ಹೋರಾಟಗಾರರಲ್ಲವೆಂದು ತೀರ್ಮಾನ ಮಾಡಿದ್ದೀರಾ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸ್ವಾತಂತ್ರ್ಯ ಯೋಧರೆಲ್ಲರೂ ಈಗ ಎಂಭತ್ತರ ಗಡಿಯನ್ನು ದಾಟಿದವರು, ಅವರಿಗೆ ಪ್ರಯಾಣದ ಕಾಲದಲ್ಲಿ ಒಬ್ಬ ಸಂಗಾತಿಯ ಅವಶ್ಯಕತೆ ಇದೆ, ರಾಜ್ಯದ ಯಾವುದೇ ಬಸ್‌ಗಳಲ್ಲಿ ತಾರತಮ್ಯಕ್ಕೆ ಅವಕಾಶ ನೀಡದೆ, ಎಲ್ಲಾ ಬಸ್‌ಗಳಲ್ಲೂ ಸ್ವಾತಂತ್ರ್ಯ ಯೋಧರಿಗೆ ಒಬ್ಬ ಸಂಗಾತಿಯೊಡನೆ ಪ್ರಯಾಣಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಅವರು ಕೇಳಿದ್ದಾರೆ, ನಾನು ಇನ್ನೂ ಕಡಿಮೆ ಮಾಡಿ ಕೊಟ್ಟಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದಲ್ಲ ಪ್ರಶ್ನೆ ಗೋವ ವಿಮೋಚನ ಹೋರಾಟಗಾರದ್ದನ್ನು ಏನೆಂದು ತೀರ್ಮಾನ ಮಾಡಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಎಲ್ಲರೂ ಎಂದು ಹೇಳಿಲ್ಲ, ಅದರಲ್ಲಿ ಸಾಕಷ್ಟು ಯುವಕರು ಅವರು ಇವರು ಎಲ್ಲಾ ಕೊಟ್ಟ ಮೇಲೆ, ಅದರಲ್ಲಿ ಸಾಕಷ್ಟು ಜನ ಯಾರು ಸ್ವಾತಂತ್ರ್ಯ ಹೋರಾಟಗಾರರಲ್ಲ ಅವರ ಸಂಖ್ಯೆಯೇ ಜಾಸ್ತಿ ಇತ್ತು ಅದಕ್ಕೆ ಒಂದು ತನಿಖೆ ಮಾಡಿ ಅದರಲ್ಲಿ ಸಾಕಷ್ಟು ಅಪ್ರತಪ್ರ ಇದೆ ಎಂದು ಅದನ್ನು ನಿಲ್ಲಿಸಿದರು. ಆ ಕಾರಣದಿಂದ ನಾವು ಈ ಒಂದು ವಯೊಮಿತಿಯನ್ನು ಏತಕ್ಕೆ ಹಾಕಿದ್ದೇವೆಂದರೆ, ಅಲ್ಲೂ 75 ವಯಸ್ಸುಳ್ಳವರು ಇದರೊಳಗೆ ಬರುತ್ತಾರೆ. ವಿಶೇಷವಾಗಿ ಇದನ್ನು ನಾವು ಮಾಡಿದ್ದು ಏತಕ್ಕೇಂದರೆ, ಮಿಸ್‌ಯೂಸ್ ಆಗಬಾರದೆನ್ನುವ ಕಾರಣಕ್ಕೆ ಮಾಡಿದ್ದೇವೆಯೇ ಹೊರತಾಗಿ, ಅವರಿದ್ದಾರೆ, ಇವರಲ್ಲ ಎನ್ನತಕ್ಕ ಪ್ರಶ್ನೆಯಲ್ಲ, ದೇಶದ ಸ್ವಾತಂತ್ರ್ಯಕ್ಕೆ ಅದು ಗೋವಇರಬಹುದು, ಭಾರತದೇಶ ಇರಬಹುದು ಇಡೀ ದೇಶದ ಒಂದು ಚಳುವಳಿಯಲ್ಲಿ ಭಾಗವಹಿಸಿದ ಪ್ರಕ್ರಿಯೆ ಇರಬಹುದು ಅದರ ಬಗ್ಗೆ ನಾವು ಮಾತನಾಡುತ್ತಿಲ್ಲ ಮತ್ತೆ ಅದನ್ನು ಗುರುತಿಸತಕ್ಕಂಥವರು ನಾವಲ್ಲ. ಹೋಂ ಡಿಪಾರ್ಟ್‌ಮೆಂಟ್‌ನವರು ಐಡೆಂಟಿಫೈ ಮಾಡಿ ಸರ್ಟಿಫಿಕೇಟ್‌ಗಳನ್ನು ನೋಡಿ, ಅವರು ಡಿಕ್ಲೇರ್ ಮಾಡುತ್ತಾರೆಯೇ ಹೊರತು ನಾವು ಮಾಡತಕ್ಕಂಥದ್ದಲ್ಲ. ಯಾರು ಸ್ವಾತಂತ್ರ್ಯ ಯೋಧರೆನ್ನುವ ಒಂದು ಐಡೆಂಟಿಟಿ ಕಾರ್ಡ್ ಅಥವಾ ಪರ್ಮಿಟ್ ಕೊಡುತ್ತಾರೋ ಅಂತಹವರಿಗೆ ಮಾತ್ರ ನಾವು ಕೊಡುತ್ತೇವೆ.

ಅಧ್ಯಕ್ಷರು: ಈಗ ಇಂಡಿಪೆಂಡೆಂಟ್ ಮೆಂಬರ್ಸ್ ಮಾತನಾಡುತ್ತೀರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬಿ.ಆರ್. ಪಾಟೀಲರು, ತಮ್ಮ ಚರ್ಚೆಯನ್ನು ಅರ್ಧದಲ್ಲಿ ನಿಲ್ಲಿಸಿದ್ದರು.

9. ವಿತ್ತೀಯ ಕಾರ್ಯಕಲಾಪ: (ಮುಂದು)

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ ಮತ್ತು ಸರ್ಕಾರದ ಉತ್ತರ

ಶ್ರೀ ಬಿ.ಆರ್. ಪಾಟೀಲ್: ನಾನು ಮುಗಿಸುವುದರಲ್ಲಿದ್ದೆ, ಅಷ್ಟರಲ್ಲಿ ಮಾನ್ಯ ಯಡಿಯೂರಪ್ಪನವರು ಈಲ್ಡ್ ಆಗಿ ಎಂದಿದ್ದಕ್ಕೆ ನಿಲ್ಲಿಸಿದೆ. ಈ ಮಧ್ಯೆ ಮಾನ್ಯ ಜೀವಿಜಯ ಅವರು ಏನೋ ಮಾತನಾಡುತ್ತೇನೆಂದರು. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ನೀಡಿದರು. ಮಾನ್ಯ ಅಧ್ಯಕ್ಷರೆ, ನಾನು ಹೇಳುವ ವಿಷಯವೇನೆಂದರೆ, ಈಗೇನು ಪಂಚಾಯಿತಿಗಳಿಗೆ ಸಂಪೂರ್ಣ ಅಧಿಕಾರವನ್ನು ಕಾನೂನು ಮೂಲಕ ಕೊಟ್ಟಿದ್ದೇವೆಂದು ಹೇಳಿದರೂ ಕೂಡ, ಇನ್ನೂ ಅವರಿಗೆ ಅನೇಕ ವಿಷಯಗಳಲ್ಲಿ ಅಧಿಕಾರವನ್ನು ಕೊಟ್ಟಿಲ್ಲ. ಉದಾಹರಣೆಗೆ, ಕಳೆದ ಅಧಿವೇಶನದಲ್ಲಿ ವಿದುರಾಶ್ವಥದ ಹತ್ತಿರ ಮರಳು ಸಾಗಾಣಿಕೆಯ ಬಗ್ಗೆ ಈ ಸದನದಲ್ಲಿ ಬಹಳ ಗಂಭೀರವಾಗಿ ಚರ್ಚೆಯಾಯಿತು; ಸರ್ಕಾರ ಕೂಡ ಅದರ ಬಗ್ಗೆ ಕ್ರಮ ಕೈಗೊಂಡಿತು. ಇದು ಪಂಚಾಯಿತಿಯ ವ್ಯಾಪ್ತಿಗೆ ಬರುವ ಸಂಪನ್ಮೂಲ. ಆದರೆ ಇದನ್ನು ಲೀಸ್‌ಗೆ ಕೊಡುವವರ್ಯಾರು? ರಾಜ್ಯ ಸರ್ಕಾರದ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನವರು. ನಾವಿಲ್ಲಿ ಗಮನಿಸಬೇಕಾದಂತಹ ವಿಷಯವೇನೆಂದರೆ, ಪಂಚಾಯಿತಿಗಳಿಗೆ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಿಕೊಳ್ಳುವುದಕ್ಕೆ ಅವಕ್ಕೆ ಸ್ವತಂತ್ರವಾದ ಅಧಿಕಾರವಿರಬೇಕಾದರೆ, ಆ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಪನ್ಮೂಲಗಳ ಬಗ್ಗೆ ಸಂಪೂರ್ಣವಾದ ಅಧಿಕಾರವನ್ನು ಗ್ರಾಮ ಪಂಚಾಯಿತಿಗಳಿಗೆ ಕೊಡಬೇಕಾಗುತ್ತದೆ; ಅವರ ಮಾತನ್ನು ನೀವು ಕೇಳಲೇಬೇಕು ಎಂದು ಅಲ್ಲ. ಕನಿಷ್ಠ ಪಕ್ಷ ಅವರ ಅನಿಸಿಕೆ, ಸತ್ಯಾಂಶ ಹಾಗೂ ಭಾವನೆಗಳನ್ನು ತಿಳಿದುಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಇವತ್ತು ಏನಾಗಿದೆ ಎಂದರೆ, ರಾಜ್ಯ ಸರ್ಕಾರಗಳು ಪಂಚಾಯತ್‌ರಾಜ್ ವ್ಯವಸ್ಥೆಯ ಮೇಲೆ ಸವಾರಿ ಮಾಡಲು ಹೊರಟಿವೆ, ರಾಜ್ಯ ಸರ್ಕಾರಗಳ ಮೇಲೆ ಕೇಂದ್ರ ಸರ್ಕಾರ ಸವಾರಿ ಮಾಡಲು ಹೊರಟಿದೆ, ಕೇಂದ್ರ ಸರ್ಕಾರದ ಮೇಲೆ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು, ಶ್ರೀಮಂತ ರಾಷ್ಟ್ರಗಳು ಸವಾರಿ ಮಾಡಲು ಹೊರಟಿವೆ. ಹೀಗೆ ಸವಾರಿ ಮಾಡುವ ಸಂದರ್ಭದಲ್ಲಿ ಸಾಮಾನ್ಯ ಜನರ ಗತಿಯೇನಾಗುತ್ತದೆ ಮತ್ತು ಅವರ ಭಾವನೆ ಹಾಗೂ ಅನಿಸಿಕೆಗಳ ಗತಿಯೇನಾಗುತ್ತದೆ? ಇದನ್ನು ನಾವೆಲ್ಲರೂ ರಾಜಕಾರಣದಲ್ಲಿರುವವರು ಬಹಳ ಗಂಭೀರವಾಗಿ ವಿಚಾರ ಮಾಡಬೇಕಾಗುತ್ತದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಪಂಚಾಯಿತಿಗಳಿಗೇನು ಅಧಿಕಾರ ಕೊಡಬೇಕೆನ್ನುವ ಚಿಂತನೆ ಇದೆ, ಅದಕ್ಕೆ ರಾಜ್ಯ ಸರ್ಕಾರದವರು ಬಹಳ ಸ್ಪಷ್ಟವಾಗಿ ನಿರ್ದೇಶನ ಕೊಡಬೇಕು ಮತ್ತು ಆ ಒಂದು ಸೂಚನೆಯನ್ನು ಕೊಡಬೇಕು. ಯಾವ ಅಧಿಕಾರ ಯಾರಿಗಿದೆ ಎಷ್ಟರಮಟ್ಟಿಗಿದೆ, ಅವರು ಎಷ್ಟರಮಟ್ಟಿಗೆ ಚಲಾವಣೆ ಮಾಡುವುದಕ್ಕೆ ಸಾಧ್ಯತೆ ಇದೆ, ಇದನ್ನು ರಾಜ್ಯ ಸರ್ಕಾರ ಬಹಳ ಸ್ಪಷ್ಟವಾಗಿ ನಿರ್ದೇಶನ ಕೊಡಬೇಕು ಮತ್ತು ಆ ಒಂದು ಸೂಚನೆಯನ್ನು ಕೊಡಬೇಕು. ಯಾವ ಅಧಿಕಾರ ಯಾರಿಗಿದೆ ಎಷ್ಟರಮಟ್ಟಿಗಿದೆ, ಅವರು ಎಷ್ಟರಮಟ್ಟಿಗೆ ಚಲಾವಣೆ ಮಾಡುವುದಕ್ಕೆ ಸಾಧ್ಯತೆ ಇದೆ, ಇದನ್ನು ರಾಜ್ಯ ಸರ್ಕಾರ ಬಹಳ ಸ್ಪಷ್ಟವಾಗಿ ಹೇಳಬೇಕು. ಉದಾಹರಣೆಗೆ ಗ್ರಾಮಪಂಚಾಯಿತಿಗಳು; ಅವರು ಅಧಿಕಾರವನ್ನು ಚಲಾವಣೆ, ತಾಲ್ಲೂಕು ಪಂಚಾಯಿತಿಯವರು,

ಜಿಲ್ಲಾ ಪಂಚಾಯಿತಿಯವರು ಅಧಿಕಾರವನ್ನು ಚಲಾವಣೆ ಮಾಡುತ್ತಾರೆ. ಇವರು ಕೆಲಸ ತೆಗೆದುಕೊಂಡಿದ್ದು ಅವರಿಗೆ ಗೊತ್ತಿಲ್ಲ, ಅವರು ಕೆಲಸ ತೆಗೆದುಕೊಂಡಿದ್ದು ಇವರಿಗೆ ಗೊತ್ತಿಲ್ಲ. ಏಕೆಂದರೆ, ಪ್ಲಾನಿಂಗ್ ಇವತ್ತಿನವರೆಗೂ ಒಂದು ಸ್ಪಷ್ಟವಾದ ಒಂದು ಯೋಜನಾಬದ್ಧವಾದ ಕಾರ್ಯಕ್ರಮವಾಗಲಿಲ್ಲ. ಹಾಗಾಗಿ ಈ ಆದ್ಯತೆಗಳ ಮೇಲೆ ಗ್ರಾಮಪಂಚಾಯಿತಿಗಳಲ್ಲಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಒಬ್ಬರಿಗೊಬ್ಬರು ಪೂರಕವಾಗಿ ಕೆಲಸಗಳನ್ನು ತೆಗೆದುಕೊಳ್ಳುವಂತಹ ಹೊಂದಾಣಿಕೆಯನ್ನು ನಾವು ಮಾಡಿಕೊಂಡು ಹೋದರೆ ಈ ಒಂದು ವ್ಯವಸ್ಥೆಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆ. ಕಳೆದ ಅಧಿವೇಶನದಲ್ಲಿ ಒಂದು ಚರ್ಚೆ ಬಂದಾಗ ಮಾನ್ಯ ಸಚಿವರು ಹೇಳಿದರು, ಈ ಜಿಲ್ಲಾ ಪಂಚಾಯಿತಿಯಲ್ಲಿ 33000ಕ್ಕೂ ಮೇಲ್ಪಟ್ಟು ಕೆರೆಗಳಿವೆ ಎನ್ನುವುದು ಇಲ್ಲಿ ಚರ್ಚೆಗೆ ಬಂತು. ಅದನ್ನು ತಮ್ಮ ಈ ಯೋಜನೆಯಲ್ಲೂ ಕೂಡ ಹೇಳುತ್ತಾರೆ. ಆದರೆ ಇವತ್ತು ಈ ಕೆರೆಗಳ ಬಗ್ಗೆ ಜಿಲ್ಲಾ ಪಂಚಾಯಿತಿಯಲ್ಲಿ ಎಲ್ಲೂ ಕೂಡ ಚರ್ಚೆಯಾಗುವುದಿಲ್ಲ, ಇದಕ್ಕೆ ದುಡ್ಡು ಖರ್ಚು ಮಾಡಿ ಹೂಳೆತ್ತುವುದಾಗಲಿ, ಸುಧಾರಣೆ ಮಾಡುವುದಾಗಲಿ, ಎಲ್ಲಿಯೂ ಕೂಡ ಅಲ್ಲಿ ಚರ್ಚೆಯಾಗುತ್ತಿಲ್ಲ. ಮತ್ತೆ ಗ್ರಾಮಪಂಚಾಯಿತಿಗಳು ಕೂಡ ಸ್ವಂತ ಅವರೇ ದುಡ್ಡು ಖರ್ಚು ಮಾಡಿ ಇ ಅಂತರ್ಜಲ ಹೆಚ್ಚು ಮಾಡುವುದಕ್ಕೆ ಅವರಿಗೂ ಕೂಡ ಅಧಿಕಾರವಿದೆ. ಅವರೂ ಕೂಡ ಆ ಕೆಲಸ ಮಾಡುತ್ತಿಲ್ಲ. ಈ ಎಸ್‌ಜೆಆರ್‌ವೈನಲ್ಲಿ ಮಾಡಬೇಕಾದ ಕೆಲಸಗಳನ್ನು ಬಿಟ್ಟು ಬೇರೆ ಇತರೆ ಕೆಲಸಗಳನ್ನೂ ಕೂಡ ಇವತ್ತು ಮಾಡುತ್ತಿದ್ದಾರೆ. ಹಾಗಾಗಿ ಒಟ್ಟಿನಲ್ಲಿ ಈ ವ್ಯವಸ್ಥೆ ಬಹಳ ಗೊಂದಲದಲ್ಲಿರುವುದರಿಂದ, ಈ ಪಂಚಾಯತ್‌ರಾಜ್ ವ್ಯವಸ್ಥೆಗೆ ಒಂದು ದಿಕ್ಕು ಮತ್ತು ನಿರ್ದೇಶನ ಕೊಡಬೇಕಾಗಿದ್ದರೆ ನಾವು ಬಹಳ ಗಂಭೀರವಾಗಿ ವಿಚಾರ ಮಾಡಬೇಕಾಗುತ್ತದೆ. ಹಾಗಾಗಿ ನಾವು ಇವತ್ತಿನ ಈ ಸಂದರ್ಭದಲ್ಲಿ ಒಟ್ಟಿನಲ್ಲಿ ಹೇಳಬೇಕೆಂದರೆ ಇವತ್ತೇನು ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆಂದು ಬರೀ ರಾಜಕೀಯ ವಿಕೇಂದ್ರೀಕರಣ ಮಾಡಿದರೆ ಸಾಲದು, ಆಡಳಿತಾತ್ಮಕ ವಿಕೇಂದ್ರೀಕರಣವನ್ನು ಕೂಡ ಮಾಡಿ. ನಾನು ಮಂತ್ರಿಗಳಿಗೆ ಹೇಳುತ್ತೇನೆ. ಇವತ್ತು ಗ್ರಾಮಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೀರಿ ಹಾಗೇಯೇ ಕಾರ್ಯದರ್ಶಿಯ ದರ್ಜೆಯನ್ನೂ ಕೂಡ ತಾವು ಹೆಚ್ಚಿಗೆ ಮಾಡಬೇಕಾಗುತ್ತದೆ. ಬೇಕಾದರೆ ಅವನಿಗೆ ಕಾರ್ಯದರ್ಶಿ ಎಂದು ಹೇಳಬೇಡಿ, ಅವನಿಗೆ ಗ್ರಾಮಾಧಿಕಾರಿ ಎಂದು ಹೇಳಿ. ಏಕೆಂದರೆ, ಅವನ ಅಂತಸ್ತನ್ನು ಕೂಡ ಸ್ವಲ್ಪ ಮೇಲೆತ್ತಿದರೆ ಅವನಿಗೆ ಕೂಡ ಒಂದು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅವನ್ಯಾರೋ ಒಬ್ಬ ಕಾರ್ಯದರ್ಶಿ, ಅವನು ಸೊಸೈಟಿ ಕಾರ್ಯದರ್ಶಿಯೋ ಪಂಚಾಯಿತಿ ಕಾರ್ಯದರ್ಶಿಯೋ ಏನೋ ಎಂದು ಈ ಮಟ್ಟಕ್ಕೆ ಇಡದೆ ಆ ಕಾರ್ಯದರ್ಶಿ ಹುದ್ದೆಯನ್ನು 'ಗ್ರಾಮಾಧಿಕಾರಿ' ಎಂದು ತಾವು ಮೇಲ್ದರ್ಜೆಗೆ ಏರಿಸಿ ಅವನಿಗೆ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟು ಅವನಿಗೆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇವತ್ತು ಗ್ರಾಮಪಂಚಾಯಿತಿಗಳ ಕಾರ್ಯದರ್ಶಿಗಳ ಹೊಸ ರೆಕ್ರೂಟ್‌ಮೆಂಟ್ ಮಾಡಬೇಕಾಗುತ್ತದೆ, ಹೊಸ ಕೇಡರ್ ಮಾಡಬೇಕಾಗುತ್ತದೆ. ಏಕೆಂದರೆ ಅನೇಕ ಜನ ಗ್ರಾಮಪಂಚಾಯಿತಿ ಕಾರ್ಯದರ್ಶಿಗಳು ಬೇರೆ ಬೇರೆ ಡಿಪಾರ್ಟ್‌ಮೆಂಟ್‌ನಿಂದ ಬಂದಿದ್ದಾರೆ. ಅನುಭವವಿಲ್ಲದೆ ಬಂದಿದ್ದಾರೆ, ಕೆಲವರು ಪ್ರಮೋಷನ್ ತೆಗೆದುಕೊಂಡು ಬಿಲ್ ಕಲೆಕ್ಟರಾಗಿ, ಗ್ರಾಮಪಂಚಾಯಿತಿ ಕಾರ್ಯದರ್ಶಿಗಳಾಗಿ ಬಂದಿದ್ದಾರೆ. ಅವರಿಗೆ ಹೇಗೆ ಕೆಲಸ ಮಾಡಲು ಸಾಧ್ಯವಿಲ್ಲ, ಅವರಿಗೆ ಅನುಭವ ಹಾಗೂ ಶಕ್ತಿ ಕೂಡ ಇಲ್ಲ. ಹೀಗಾಗಿ ಗ್ರಾಮಪಂಚಾಯಿತಿ ಕಾರ್ಯದರ್ಶಿ ಮಾಡುವಾಗ ಅವನನ್ನು ಗ್ರಾಮಾಧಿಕಾರಿಯನ್ನಾಗಿ ಮಾಡಿ, ಅವರಿಗೆ ಸ್ಪೆಶಲ್ ರೆಕ್ರೂಟ್‌ಮೆಂಟ್ ಕೇಡರ್ ಮಾಡಿ, ಇಡೀ ಗ್ರಾಮಪಂಚಾಯಿತಿಗಳಿಗೆ

ಕಾರ್ಯದರ್ಶಿಯನ್ನಾಗಿ ಮಾಡಬೇಕಾಗುತ್ತದೆ. ಇಲ್ಲಿ ಬೆಳಿಗ್ಗಿನಿಂದ ಗ್ರಾಮಸಭೆಯ ಬಗ್ಗೆ ಚರ್ಚೆ ನಡೆದಿತ್ತು, ಗ್ರಾಮಸಭೆಯ ಬಗ್ಗೆ ನನ್ನದೇ ಆದ ಕಲ್ಪನೆ ಇದೆ. ನಾವು ಈ ಪ್ರಜಾತಂತ್ರದಲ್ಲಿ ನಂಬಿಕೆ ಇಟ್ಟುಕೊಂಡು ಚುನಾವಣೆ ನಡೆಸಿ, ಚುನಾಯಿತ ಪ್ರತಿನಿಧಿಗಳು ಪಂಚಾಯಿತಿಯಲ್ಲಿ ಬಂದು ಕುಳಿತ ಮೇಲೆ ಪ್ರತಿಯೊಂದು ವಿಷಯವು ಗ್ರಾಮಸಭೆಯಲ್ಲಿ ನಿರ್ಧಾರವಾಗಬೇಕಾದರೆ ಗ್ರಾಮಪಂಚಾಯಿತಿಯಲ್ಲಿ ಗೆದ್ದು ಬಂದಂತಹವರು ಏನು ಮಾಡಬೇಕು? ಮತ್ತು ಇವತ್ತಿನ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲಾ ಸಮಸ್ಯೆಗಳನ್ನು ಜನರ ಹತ್ತಿರಕ್ಕೆ ಒಯ್ದು ಬಗೆಹರಿಸುವುದಕ್ಕೆ ಸಾಧ್ಯತೆ ಇಲ್ಲ ಏಕೆಂದರೆ, ಅಷ್ಟು ಕಲುಷಿತವಾದ ವಾತಾವರಣವಿದೆ. ಮಂತ್ರಿಗಳು ಮಾತನಾಡುವಾಗ ಒಂದು ವಿಚಾರವನ್ನು ಹೇಳಿದಿರಿ, ಅಕೌಂಟೆಬಿಲಿಟಿಯನ್ನು ಬೇಕಾದರೆ ಗ್ರಾಮಸಭೆಗೆ ಹೋಗಿ ಕೊಡಲಿ, ಇಷ್ಟು ಹಣ ಬಂತು ಈ ಕೆಲಸಗಳಿಗೆ ಖರ್ಚಾಗಿದೆ, ಪಾರದರ್ಶಕತೆ ಇರಲಿ, ಅವರಿಗೆ ಲೆಕ್ಕ ಕೊಡಲಿ. ಆದರೆ ಪ್ರತಿಯೊಬ್ಬ ಫಲಾನುಭವಿಯನ್ನು ಆಯ್ಕೆ ಮಾಡುವಾಗಲೂ ಕೂಡ ಎಲ್ಲಾ ಗ್ರಾಮಪಂಚಾಯಿತಿಯಲ್ಲಿ ನಿರ್ಧಾರವಾಗಬೇಕಾದರೆ ಗ್ರಾಮಪಂಚಾಯಿತಿಗಳಿಗೆ ಅರ್ಥವೇ ಇಲ್ಲ. ಹಾಗಾದರೆ ನಾವು ಶಾಸನಸಭೆಯಲ್ಲಿ ಕುಳಿತು ನಾವೇನು ಕಾರ್ಯಕ್ರಮವನ್ನು ನಿರ್ಧಾರ ಮಾಡುತ್ತೇವೆ, ನಾವೂ ಜನರಿಗೆ ಕೇಳಿ ಮಾಡುತ್ತೇವೆಯೇ? ಪಾರ್ಲಿಮೆಂಟ್‌ನಲ್ಲಿ ಕುಳಿತವರೂ ಕೂಡ ಜನರಿಗೆ ಕೇಳಿ ಮಾಡುತ್ತಾರೆಯೇ? ಇದನ್ನು ಗ್ರಾಮಪಂಚಾಯಿತಿಯವರಿಗೆ ಏತಕ್ಕೆ ಅನ್ವಯಿಸುತ್ತೀರಿ? ಗ್ರಾಮಸಭೆಗಳಲ್ಲಿ ಏನು ನಿರ್ಧಾರ ಮಾಡುತ್ತಾರೆ, ಗ್ರಾಮಪಂಚಾಯಿತಿಯಲ್ಲಿ ಗೆದ್ದು ಬಂದಂತಹ ಸದಸ್ಯರಿಗೆ ಸಂಪೂರ್ಣವಾದ ಜವಾಬ್ದಾರಿಯನ್ನು ಕೊಡಿ. ಅವರು ಯಾವ್ಯಾಗ ಫಲಾನುಭವಿಗಳನ್ನು ಸೆಲೆಕ್ಟ್ ಮಾಡಬೇಕು, ಯಾವ್ಯಾವ ಕೆಲಸ–ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಅವರಿಗೆ ಕೊಟ್ಟಾಗ ಮಾತ್ರ ಜವಾಬ್ದಾರಿ ಬರುತ್ತದೆ. ಇವೊತ್ತು ಏನಾಗಿದೆಯೆಂದರೆ, ಗ್ರಾಮಸಭೆಗಳು ಎಲ್ಲಿಯೂ ಕೂಡ ಆಗುತ್ತಿಲ್ಲ. ಇದು ಬಹಳ ಸ್ಪಷ್ಟವಾಗಿದೆ. ಇವೊತ್ತು ಅನೇಕ ಸದಸ್ಯರುಗಳು ಹೇಳಿದ್ದಾರೆ. ಗ್ರಾಮಸಭೆಗಳಿಗೆ ಯಾವುದೇ ಅಧಿಕಾರಿಗಳು ಹೋಗುವುದಿಲ್ಲ. ಗ್ರಾಮಸಭೆ ನಡೆದರೂ ಅದು ಮಧ್ಯಾಹ್ನ ನಡೆಯುತ್ತದೆ. ಆಗ ರೈತರೆಲ್ಲಾ ಕೆಲಸ ಮಾಡುವುದಕ್ಕೆ ಹೊಲಗಳಿಗೆ ಹೋಗಿರುತ್ತಾರೆ. ನಾಮ್‌ಕಾವಾಸ್ತೆಗೆ, ಕಾಟಾಚಾರಕ್ಕೆ ಒಂದು ಗ್ರಾಮಸಭೆ ಆಗುತ್ತದೆ. ಕಾಗದದಲ್ಲಿ ಬರೆದುಕೊಂಡು ಬಂದು ನಾವು ಗ್ರಾಮಸಭೆ ಮಾಡಿದ್ದೇವೆಂದು ಹೇಳಿ ನಿಮಗೆ ವರದಿ ಕೊಡುತ್ತಾರೆ. ಹಾಗಾಗಿ, ಇವೊತ್ತು ಗ್ರಾಮಸಭೆ ಮಾಡುವುದನ್ನು ಒಂದು ಅಕೌಂಟಬಿಲಿಟಿಗೋಸ್ಕರ ಗ್ರಾಮಸಭೆ ಮಾಡುವ ವ್ಯವಸ್ಥೆ ಇದೆಯೇ ಹೊರತು ಎಲ್ಲಾ ನಿರ್ಣಯಗಳನ್ನೂ ಗ್ರಾಮಸಭೆಯಲ್ಲಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅಲ್ಲಿ ಗೆದ್ದು ಬಂದಂಥವರಿಗೆ ಅಲ್ಲಿ ಅವಕಾಶ ಮಾಡಲಿಕ್ಕೆ ಸಾಧ್ಯತೆಯಿಲ್ಲ. ಇಂತಹ ಒಂದು ಪದ್ಧತಿಯನ್ನು ಅಳವಡಿಸಿಕೊಂಡು ಬಂದರೆ ಮಾತ್ರ ಒಂದು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಗಟ್ಟಿಯಾಗಿ ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಡಾಃ ಲೋಹಿಯಾರವರು ವಿಕೇಂದ್ರೀಕರಣ ವ್ಯವಸ್ಥೆಗೆ ಚೌಕಂಬ ವ್ಯವಸ್ಥೆ ಬರಬೇಕೆಂದು ಹೇಳಿದರು. ಒಂದು ಪಾರ್ಲಿಮೆಂಟ್, ಒಂದು ರಾಜ್ಯ ಸರ್ಕಾರ, ಒಂದು ಜಿಲ್ಲಾ ಸರ್ಕಾರ ಮತ್ತು ಒಂದು ಗ್ರಾಮ ಸರ್ಕಾರ. ಇವೊತ್ತು ತಾವೇನು ರಚನೆ ಮಾಡಿದ್ದೀರಿ, ಅದಕ್ಕೆ ಶಕ್ತಿ ತುಂಬುವಂಥ ಕೆಲಸವಾಗಬೇಕು. ಈ ಶಕ್ತಿ ತುಂಬುವಂಥ ಕೆಲಸವಾಗಬೇಕಿದ್ದರೆ, ನಾವು ಎಲ್ಲರ ಬಗ್ಗೆ ಕೂಡ ಗಮನ ವಹಿಸಬೇಕಾಗುತ್ತದೆ. ಮತ್ತು ಅದಕ್ಕೆ ಎಲ್ಲಾ ವ್ಯವಸ್ಥೆಗಳನ್ನೂ ಕೂಡ ಮಾಡಬೇಕಾಗುತ್ತದೆ. ಅಂತಹ ಒಂದು ವ್ಯವಸ್ಥೆ ಮಾಡಿ ಇವೊತ್ತು ಏನು Bureancracy V/s Democracy ನಡೆದಿದೆ, ವಾಸ್ತವಿಕವಾಗಿ ಇವೊತ್ತು

ನಮ್ಮಲ್ಲಿ ಡೆಮಾಕ್ರಸಿ ಪ್ರಾಕ್ಟಿಸ್ ಆಗುತ್ತಿಲ್ಲ. ಬ್ಯೂರೋಕ್ರಸಿ ಮಾತ್ರ ನಡೆಯುತ್ತಿದೆಯೇ ಹೊರತು ಡೆಮಾಕ್ರಸಿ ನಡೆಯುತ್ತಿಲ್ಲ. ಹಾಗಾಗಿ, ಇವೊತ್ತು ಪ್ರಜಾತಂತ್ರಕ್ಕೆ ಇದೊಂದು ದೊಡ್ಡ ಕಳಂಕ. ಅಧಿಕಾರಶಾಹಿ ನಮ್ಮ ಹೆಸರಿನ ಮೇಲೆ ನಡೆಯುತ್ತಿದೆಯಲ್ಲ, ಇದನ್ನು ಮಟ್ಟ ಹಾಕಬೇಕಿದ್ದರೆ, ಅಧಿಕಾರಶಾಹಿಗೆ ಮಟ್ಟ ಹಾಕಿ ನಿಜವಾದ ಅಧಿಕಾರವನ್ನು ಗೆದ್ದು ಬಂದಂಥ ಪ್ರತಿನಿಧಿಗಳಿಗೆ ಕೊಟ್ಟಾಗ ಮಾತ್ರ ಪ್ರಜಾತಂತ್ರ ವಿಕೇಂದ್ರೀಕರಣದ ವ್ಯವಸ್ಥೆ ಸಾರ್ಥಕವಾಗುವುದಕ್ಕೆ ಸಾಧ್ಯತೆಯಿದೆ ಅನ್ನುವಂಥ ಮಾತನ್ನು ಹೇಳುತ್ತೇನೆ. ಇವೊತ್ತು ಪಂಚಾಯತ್‌ನಂತಹ ರಾಜಕೀಯ ವ್ಯವಸ್ಥೆಯಲ್ಲಿ ಏನು ನಾವು ಲೋಪ–ದೋಷಗಳನ್ನು ನೋಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೆ, ಇವೊತ್ತು ನಮ್ಮ ದೇಶದಲ್ಲಿ ಪಕ್ಷದ ವ್ಯವಸ್ಥೆ ಗಟ್ಟಿಯಾಗಿ ಬೆಳೆದು ಬರುತ್ತಿಲ್ಲ. ಪಾರ್ಟಿ ಸಿಸ್ಟಮ್ ಗಟ್ಟಿಯಾಗಿ ಬೆಳೆದು ಬಂದರೆ, ಇವೊತ್ತು ರಾಜಕಾರಣದಲ್ಲಿ ಇಷ್ಟೊಂದು ಗೊಂದಲಗಳಾಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. . . . . ಮಾನ್ಯ ಅಧ್ಯಕ್ಷರೆ, ಹಿಂದೆ ಮಾತನಾಡುತ್ತಿದ್ದಾರೆ..... ತಾವು ನಿಯಂತ್ರಣ ಮಾಡುತ್ತಿಲ್ಲ.

ಅಧ್ಯಕ್ಷರು: ಏನದು? ಅಲ್ಲಲ್ಲಿ ಸುಮ್ಮನೆ ಗುಂಪು ಸೇರಿಕೊಳ್ಳುವುದು, ಮಾತನಾಡುವುದು...

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗ ಇಲ್ಲಿ ಮಂತ್ರಿಗಳಿದ್ದಾರೆ. ಒಂದಿಬ್ಬರು ಮಂತ್ರಿಗಳು ಮಾತ್ರ ಗಂಭೀರವಾಗಿ ಚರ್ಚೆಯಲ್ಲಿ ಭಾಗವಹಿಸಿದ್ದಾರೆ, ಕೇಳುತ್ತಿದ್ದಾರೆ. ಉಳಿದವರು ತಂತಮ್ಮ ಕೆಲಸದಲ್ಲಿದ್ದಾರೆ. ಹಾಗಾಗಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ಇಲ್ಲಿಗೆ ನನ್ನ ಮಾತುಗಳನ್ನು ಮುಗಿಸಿ ಕುಳಿತುಕೊಳ್ಳುತ್ತೇನೆ.

ಶ್ರೀ ಮಮಾಣಿ ವಿಶ್ವನಾಥ್ ಕರಬಸಪ್ಪ(ಪರಸಗಡ): ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲು ತಮಗೆ ಧನ್ಯವಾದಗಳನ್ನರ್ಪಿಸುತ್ತಾ, ಒಂದೆರಡು ಇಲಾಖೆಗಳ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮೊದಲನೆಯದಾಗಿ, ಇರಿಗೇಶನ್ ಡಿಪಾರ್ಟ್‌ಮೆಂಟ್‌ನಲ್ಲಿ ನನ್ನ ತಾಲ್ಲೂಕಿಗೆ ಸೀಮಿತವಾಗಿ ನಾನು ಮಾತನಾಡಲು ಇಚ್ಛೆಪಡುತ್ತಿದ್ದೇನೆ. ನಮ್ಮಲ್ಲಿ ಮಲಪ್ರಭಾ ಅಣೆಕಟ್ಟು ಕಟ್ಟಿ ಮೂವತ್ತು ವರ್ಷಗಳಾದ ಮೇಲೆ ನೀರಿನ ನಿರ್ವಹಣೆ ಏನಿದೆ, ನೀರು 50 ಪರ್ಸೆಂಟ್ ಭೂಮಿಗೂ ಹೋಗುತ್ತಿಲ್ಲ. ಏಕೆಂದರೆ, ಅಲ್ಲಿರತಕ್ಕ ಕೆನಾಲ್ ರಿಪೇರಿಗೆ ಬಂದಿದೆ. ಮತ್ತು ರಿ–ಮಾಡೆಲಿಂಗ್ ವರ್ಕ್ಸ್ ಅನ್ನು ನಾವು ಎಕ್ಸ್‌ಟೆನ್ಸಿವ್ ಆಗಿ ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ಸ್ವಲ್ಪ ಮಾಡಿದ್ದಾರೆ, ಮಾಡಿಲ್ಲ ಅಂತ ಏನಿಲ್ಲ. 50 ಪರ್ಸೆಂಟ್ ಆಗಿದೆ. ಇನ್ನು 50 ಪರ್ಸೆಂಟ್ ರಿ–ಮಾಡಲಿಂಗ್ ವರ್ಕ್ ಆಗತಕ್ಕಂಥಾದ್ದು ಇದೆ. ಹೀಗಾಗಿ, ನಮ್ಮಲ್ಲಿ 11 ಲಿಫ್ಟ್ ಇರಿಗೇಶನ್ ಸ್ಕೀಮ್‌ಗಳು ಇದ್ದರೂ ಅಲ್ಲಿರುವ ಮೆಷಿನರಿಗಳೇನಿವೆ, ಅವು ಡಿಸ್‌ಕಾರ್ಡ್ ಆಗಿವೆ. ಓವರ್ ವರ್ಕ್ ಆಗಿ ಕಳೆದ ಮೂವತ್ತು ವರ್ಷಗಳಿಂದ ಆ ಮೆಷಿನರಿಯನ್ನು ಚೇಂಜ್ ಮಾಡಿಲ್ಲ. ನೀರೆತ್ತುವಂಥ ಸಾಮರ್ಥ್ಯ ಕಡಿಮೆಯಾಗಿರುವುದರಿಂದ ಆ ಮೆಷಿನ್ ಅನ್ನು ಚೇಂಜ್ ಮಾಡುವಂಥ ಸಂಭವ ಈಗ ಇದೆ. ಅದನ್ನು ಚೇಂಜ್ ಮಾಡಿದರೆ ಮಾತ್ರ ನೀರು ಟೇಲ್ ಎಂಡ್‌ಗೆ ಹೋಗುವಂಥ ಒಂದು ಸಂದರ್ಭವಾಗುತ್ತದೆ. ಮತ್ತು ಈಗ ನೀರು ನಿರ್ವಹಣೆ ಮಾಡುವುದಕ್ಕೆ ರೈತರ ಸಂಘಗಳನ್ನು ಏನು ಮಾಡಿದ್ದಾರೆ, ಆ ಸಂಘಗಳನ್ನು ಮಾಡಿದ್ದಕ್ಕೆ ಅವುಗಳಿಗೆ ಅನುದಾನವಿಲ್ಲ. ಒನ್ ಟೈಮ್ ಗ್ರಾಂಟ್ ಎಂದು ಆರು ಲಕ್ಷ ರೂಪಾಯಿಗಳನ್ನು ಮೊದಲ ವರ್ಷ ಬಿಡುಗಡೆ ಮಾಡಿ ಆಮೇಲೆ ಆ ಸಂಘಗಳಿಗೆ ಅನುದಾನ ಕೊಡದಿರುವುದರಿಂದ ಅಲ್ಲಿ ಕೆಲಸವಾಗುತ್ತಿಲ್ಲ. ಡಿಸ್ಟ್ರಿಬ್ಯೂಟರಿಯಲ್ಲಿ ನೀರು ಹೋಗುತ್ತಿಲ್ಲ ಮೇನ್ ಕೆನಾಲ್‌ನಲ್ಲಿ ಮಾತ್ರ ನೀರು ಹೋಗುತ್ತಿದೆ. 500 ಹೆಕ್ಟೇರ್‌ಗಳಿಗೆ ಒಂದರಂತೆ ರೈತರು ಏನು

ಸಂಘಗಳನ್ನು ಮಾಡಿದ್ದಾರೆ, ಆ ಸಂಘಗಳಿಗೆ ಅನುದಾನದ ಕೊರತೆ ಇರುವುದರಿಂದ ಕೇವಲ ಒಂದು ಹೆಕ್ಟೇರ್‌ಗೆ ಒಂದು ನೂರು ರೂಪಾಯಿಯಂತೆ ಅನುದಾನ ಬಿಡುಗಡೆ ಮಾಡಿದ್ದಾರೆ. ಆ ಗ್ರಾಂಟ್ ಸಾಲುವುದಿಲ್ಲ. ಹೀಗಾಗಿ, ಅಲ್ಲಿ ಏನಾಗುತ್ತಿದೆಯೆಂದರೆ, ಆ ಡಿಸ್ಟ್ರಿಬ್ಯೂಟರಿ ರಿಪೇರಿ ಆಗದಿದ್ದ ಕಾರಣ ನೀರು ಪೋಲಾಗಿ ಹೋಗುತ್ತಿದೆ. ಆ ಸಂಘಗಳನ್ನು ನಾವು ಸಬಲೀಕರಣಗೊಳಿಸುವುದಾದರೆ, ಅನುದಾನವನ್ನು ದಯವಿಟ್ಟು ಬಿಡುಗಡೆ ಮಾಡಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಮತ್ತು ಈ ಮಲಪ್ರಭಾ ಡ್ಯಾಮ್‌ನಲ್ಲಿ ನೀರು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹವಾಗುತ್ತಿಲ್ಲ. ಕಳಸಾ-ಬಂಡೂರಿ ಸಲುವಾಗಿ ಸಾಕಷ್ಟು ಹೋರಾಟ ನಡೆದಿದೆ. ಅದನ್ನು ಜೋಡಿಸಿದರೆ ಮಾತ್ರ, ಕಳಸ ಮತ್ತು ಬಂಡೂರಿ ನಾಲಾ ಜೋಡಣೆ ಮಾಡಿದರೆ ಮಾತ್ರ ಮಲಪ್ರಭಾದಲ್ಲಿ ನೀರು ತುಂಬುವುದಕ್ಕೆ ಸಾಧ್ಯವಿದೆ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಅದಲ್ಲದೆ, ಇನ್ನು ಆರೋಗ್ಯ ಇಲಾಖೆ ಬಗ್ಗೆ ಹೇಳಬೇಕೆಂದರೆ, ನನ್ನ ಸವದತ್ತಿ ಕ್ಷೇತ್ರದಲ್ಲಿ ಸವದತ್ತಿ ತಾಲ್ಲೂಕಿನ ಗವರ್ನಮೆಂಟ್ ಹಾಸ್ಪಿಟಲ್‌ನಲ್ಲಿ 100 ಬೆಡ್ ಹಾಸ್ಪಿಟಲ್ ಎಂದು ಮಾಡಿ ಓಪನಿಂಗ್ ಆಗಿ ಮೂರು ವರ್ಷಗಳಾಗಿವೆ. ಅಲ್ಲಿ ಹೊಸದಾಗಿ ಬಿಲ್ಡಿಂಗ್ ಕಟ್ಟಿದ್ದಾರೆ. ಅಲ್ಲಿಗೆ ಯಾವ ಸೌಕರ್ಯಗಳನ್ನು ಕೊಡಬೇಕಾಗಿತ್ತೋ, ಆ ಸೌಕರ್ಯಗಳನ್ನು ಕೊಟ್ಟಿಲ್ಲ. ಒಂದು ಸಿಹೆಚ್‌ಸಿ ಇದೆ. ಕಮ್ಯುನಿಟಿ ಹೆಲ್ತ್ ಸೆಂಟರ್ ಎಂದು ನಾವೇನು ಹೇಳುತ್ತೇವೆ, ಅಲ್ಲಿ ವೈದ್ಯರು ಇಲ್ಲ. ಯರಗಟ್ಟಿಯಲ್ಲಿ ಇದ್ದ ಮೂರು ಜನ ಡಾಕ್ಟರುಗಳನ್ನು ಮೊನ್ನೆ ಟ್ರಾನ್ಸ್‌ಫರ್ ಮಾಡಿಬಿಟ್ಟಿದ್ದಾರೆ. ಈಗ ಒಬ್ಬ ಡಾಕ್ಟರ್ ಕೂಡ ಅಲ್ಲಿಲ್ಲ. ಟ್ರಾನ್ಸ್‌ಫರ್ ಮಾಡುವ ಸಮಯದಲ್ಲಿ ಅಲ್ಲಿ ಯಾರನ್ನಾದರೂ ಒಬ್ಬರನ್ನು ಕಳಿಸಿ, ಅಲ್ಲಿ ಇದ್ದಂಥವರನ್ನು ಟ್ರಾನ್ಸ್‌ಫರ್ ಮಾಡಬೇಕೇ ವಿನಾ ಮೂರೂ ಜನ ಡಾಕ್ಟರ್ಸ್‌ನ್ನು ಕಳಿಸಿದರೆ ಪಿ.ಹೆಚ್.ಸಿ.ಯಲ್ಲಿ ಐವತ್ತು ಬೆಡ್ ಆಸ್ಪತ್ರೆ ಇರುವಲ್ಲಿ ಒಬ್ಬರು ಡಾಕ್ಟರ್ ಕೂಡ ಇಲ್ಲ, ಇಂಥ ಪರಿಸ್ಥಿತಿ ಆರು ಪಿ.ಹೆಚ್.ಸಿ.ಯಲ್ಲಿ ಡಾಕ್ಟರ್ ಇಲ್ಲ. ಹೀಗಾದರೆ ಜನರಿಗೆ ಉತ್ತರ ಕೊಡುವುದು ಬಹಳ ಕಷ್ಟವಾಗುತ್ತದೆ. ನಾವೇನಾದರೂ ಹೊಸ ಪಿ.ಹೆಚ್.ಸಿ. ಕೇಳಲು ಹೋದರೆ, ಕೊಡುವುದಿಲ್ಲ. ಸೆಂಟ್ರಲ್ ಗವರ್ನಮೆಂಟ್ ಪರ್ಮಿಷನ್ ಇಲ್ಲವೆನ್ನುವಂಥ ಮಾತನ್ನು ಹೇಳುತ್ತಾರೆ. ಪಿ.ಹೆಚ್.ಸಿ. ಮಾಡಲಿಲ್ಲವೆಂದರೆ ಕನಿಷ್ಠ ಪಕ್ಷ ಪಿ.ಹೆಚ್.ಯು.ಗಳನ್ನಾದರೂ ಮಾಡಬೇಕು. ಕನಿಷ್ಠ ಪಕ್ಷ ಒಂದು ಪಂಚಾಯಿತಿಗೆ ಒಬ್ಬರು ಡಾಕ್ಟರನ್ನು ಕೊಡುವಂಥ ವ್ಯವಸ್ಥೆ ಮಾಡಿದರೆ, ಆರೋಗ್ಯ ದೃಷ್ಟಿಯಿಂದ ಹಳ್ಳಿಗಾಡಿನಲ್ಲಿ ಕೆಲಸ ಮಾಡುವುದಕ್ಕಾಗುತ್ತದೆ ಎಂಬ ಮಾತನ್ನು ಹೇಳಲು ಇಚ್ಛೆಪಡುತ್ತಿದ್ದೇನೆ. ಒಂದು ಪಂಚಾಯಿತಿಗೆ ಒಬ್ಬರು ಡಾಕ್ಟರನ್ನು ಕೊಡಲಿಲ್ಲವೆಂದರೆ, ಈ ಸರ್ಕಾರವಾದರೂ ಏಕಿರಬೇಕು ಎಂಬ ಮಾತನ್ನು ಹೇಳಲು ಇಚ್ಛೆಪಡುತ್ತಿದ್ದೇನೆ. ಇದ್ದಂಥ ಪಿ.ಹೆಚ್.ಸಿ.ಯಲ್ಲಿ ಡಾಕ್ಟರ್ ಇಲ್ಲ, ಹೊಸ ಪಿ.ಹೆಚ್.ಸಿ.ಯನ್ನು ತಾವು ಕೊಡುವುದಿಲ್ಲ, ಒಂದು ಪಿ.ಹೆಚ್.ಯು.ವನ್ನಾದರೂ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಇದೇ ರೀತಿ ವೆಟರ್ನರಿ ಆಸ್ಪತ್ರೆಯಲ್ಲಿ, 13 ಆಸ್ಪತ್ರೆಗಳ ಪೈಕಿ 8 ಕಡೆಗಳಲ್ಲಿ ಇವತ್ತು ಡಾಕ್ಟರ್ ಇಲ್ಲ, ಇಂತಹ ಪರಿಸ್ಥಿತಿಯಲ್ಲಿ ಜನರಿಗೆ ಬಹಳಷ್ಟು ತೊಂದರೆಯಾಗಿದೆ. ಡಾಕ್ಟರ್‌ಗಳನ್ನು ದಯವಿಟ್ಟು ಹಾಕುವಂಥ ಕೆಲಸವನ್ನು ಮಾಡಬೇಕು. ಈಗ ಏನು ತಾವು ಪಗಾರ ಕೊಡುತ್ತಿದ್ದೀರಿ, 10,000, 13,000 ಎಂದು ಸ್ಯಾಲರಿ ಏನು ನಿಗದಿ ಮಾಡಿದ್ದೀರಿ, ಆ ಪಗಾರಕ್ಕೆ ಯಾವ ಡಾಕ್ಟರ್ ಸಹ ಬಂದು ಕೆಲಸ ಮಾಡಲು ತಯಾರಿಲ್ಲ. ಪರ್ಮನೆಂಟ್ ಆಗಿ ಏನಾದರೊಂದು ಮಾಡಿದರೆ, ಪರ್ಮನೆಂಟ್ ಆಗಿ ಅವರನ್ನೇ ಅಪಾಯಿಂಟ್‌ಮೆಂಟ್ ಮಾಡಿದರೆ ಮಾತ್ರ ಸಾಧ್ಯವಿದೆ. ಇಲ್ಲದಿದ್ದರೆ, ಹತ್ತರಿಂದ ಹದಿಮೂರು ಸಾವಿರಕ್ಕೆ ಎಂ.ಬಿ.ಬಿ.ಎಸ್. ಕಲಿತಂಥವರು ಮುಂದೆ ತಮಗೆ ಯಾವುದೇ

ಪಿ.ಜಿ.ಕೋರ್ಸ್ ಸಿಕ್ಕಿದರೆ ಬಿಟ್ಟು ಹೋಗಿಬಿಡುತ್ತಾರೆ. ಒಂದು ತಿಂಗಳು ಮಾತ್ರ ಕೆಲಸ ಮಾಡುತ್ತಾರೆ. ಮುಂದೆ ಆ ಪೋಸ್ಟ್ ಮತ್ತೆ ಖಾಲಿ ಉಳಿಯುವಂಥ ಸಂದರ್ಭ ಬರುತ್ತದೆ. ದಯವಿಟ್ಟು ಪರ್ಮನೆಂಟ್ ಆಗಿ ಡಾಕ್ಟರ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡುವ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಮ್ಮಲ್ಲಿರುವಂಥಾದ್ದು ಕೃಷಿ ಆಧಾರಿತವಾದುದು. ನಮ್ಮ ತಾಲ್ಲೂಕಿನಲ್ಲಿ ಕೃಷಿ ಮಾತ್ರ ಬಹಳ ಪ್ರಾಮುಖ್ಯವಾಗಿದೆ. ಯಾವ ಇಂಡಸ್ಟ್ರಿ ಕೂಡ ಇಲ್ಲ. ಇರತಕ್ಕಂಥ ಒಂದು ಕೋ–ಆಪರೇಟೀವ್ ಸ್ಪಿನ್ನಿಂಗ್ ಮಿಲ್ ಬಂದ್ ಆಗಿದೆ. ಕನ್ವರ್ಷನ್ ಬೇಸಿಸ್ ಮೇಲೆ ಅದನ್ನು ಯಾರಿಗಾದರೂ ಕೊಡುತ್ತಾರೆಯೇ ವಿನಾ ಲೀಸ್ ಮೇಲೆ ಯಾರಿಗೂ ಕೊಡುತ್ತಿಲ್ಲ. ಅದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸರ್ಕಾರದ ಹಣ ತೊಡಗಿಸಿರುವುದರಿಂದ, ಷೇರು ಹೋಲ್ಡರುಗಳ ಹಣವನ್ನು ಸಾಕಷ್ಟು ಪ್ರಮಾಣದಲ್ಲಿ ತೊಡಗಿಸಿರುವುದರಿಂದ, ಇವೊತ್ತಿನ ಸ್ಥಿತಿಯಲ್ಲಿ ಅದು ಬಂದ್ ಆಗಿದೆ. ಅಲ್ಲಿ ಎಲೆಕ್ಷನ್ ಕೂಡ ಆಗಿಲ್ಲ. ಕೋಟ್ಯಂತರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ ಕಟ್ಟಿದಂಥ ಕೋ–ಆಪರೇಟೀವ್ ಸ್ಪಿನ್ನಿಂಗ್ ಮಿಲ್ ಬಂದ್ ಆಗಿದೆ. ಹಿಂದಿನ ಟೆಕ್ಸ್‌ಟೈಲ್ ಮಂತ್ರಿಗಳು 'ಅದನ್ನು ನಾವು ಲೀಸ್‌ಗೆ ಕೊಡುವಂಥ ವ್ಯವಸ್ಥೆ ಮಾಡುತ್ತೇವೆ' ಎಂದು ಹೇಳಿದ್ದರು. ನಾನು ಒಂದು ಪ್ರಶ್ನೆ ಹಾಕಿದ್ದೆ. ಅದು ಸ್ಟಾರ್ಡ್ ಕ್ವೆಶ್ಚನ್ ಆಗಿ ನನಗೆ ಏನು ಉತ್ತರ ಕೊಟ್ಟರು ಅಂದರೆ, 'ಸಧ್ಯದಲ್ಲಿ ಸರ್ಕಾರದ ಮುಂದೆ ಆ ವಿಚಾರ ಇಲ್ಲ' ಎನ್ನುವಂಥ ಮಾತನ್ನು ಹೇಳಿದರು. ಅದಕ್ಕೆ ಏನಾದರೂ ಮಾಡಿ ಕೋ–ಆಪರೇಟೀವ್ ಆ್ಯಕ್ಟ್‌ನಲ್ಲಿ ಸ್ವಲ್ಪ ತಿದ್ದುಪಡಿ ಮಾಡಿ ಅದನ್ನು, ಲೀಸ್‌ಗಾದರೂ ಕೊಟ್ಟು ಅಲ್ಲಿರುವ ಮೆಷಿನರಿ ಯೂಸ್ ಆಗುವಂಥ ಕೆಲಸ ಮಾಡಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಹುಬ್ಬಳ್ಳಿ–ಧಾರವಾಡದ ಕರ್ನಾಟಕ ಅರ್ಬನ್ ವಾಟರ್ ಸಪ್ಲೈನವರು ಏನು ಮಾಡುತ್ತಾರೆಂದರೆ, ಒಂದು ಡಿಸ್‌ಕಾರ್ಡ್ ಆಗಿರತಕ್ಕಂಥಾದ್ದು, ಅಲ್ಲಿ ಈಗ ಜಾಕ್‌ವೆಲ್ ಮತ್ತು ಫಿಲ್ಟರ್ ಹೌಸ್ ಉಳಿದಿದೆ. ಕೋಟ್ಯಾಂತರ ರೂಪಾಯಿಗಳಷ್ಟು ಹಣ ಖರ್ಚು ಮಾಡಿದ್ದಾರೆ. ಮತ್ತೊಂದು ಬೇರೆ ವ್ಯವಸ್ಥೆ ಮಾಡಿಕೊಂಡು ಆ ಡಿಸ್‌ಕಾರ್ಡ್ ಮಾಡಿರತಕ್ಕಂಥಾದ್ದನ್ನು ದಯವಿಟ್ಟು ಜಿಲ್ಲಾ ಪಂಚಾಯತ್‌ಗೆ ವರ್ಗಾಯಿಸಿದರೆ ಅದರಿಂದ ಸವದತ್ತಿ ತಾಲ್ಲೂಕಿಗೆ ಸಮರ್ಪಕವಾಗಿ ಕುಡಿಯುವುದಕ್ಕೆ ನೀರು ವಿತರಣೆ ಮಾಡುವುದಕ್ಕೆ ಅನುಕೂಲವಾಗುತ್ತದೆಂಬ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಈಗ ಏನಾಗುತ್ತಿದೆ, ಅದನ್ನು ಡಿಸ್‌ಕಾರ್ಡ್ ಮಾಡಿರುವುದರಿಂದ ಇದ್ದಂಥ ಪೈಪ್‌ಲೈನ್‌ಗಳೆಲ್ಲವನ್ನೂ ಕಿತ್ತುಕೊಂಡು ಹೋಗುತ್ತಿದ್ದಾರೆ. ಅದನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ಹೀಗಾಗಿ, ಅದನ್ನು ದಯಮಾಡಿ ಜಿಲ್ಲಾ ಪಂಚಾಯತ್‌ಗೆ ವರ್ಗಾವಣೆ ಮಾಡಿದರೆ ತಾಲ್ಲೂಕಿನಲ್ಲಿರತಕ್ಕ ನೀರಿನ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಅನುಕೂಲವಾಗುತ್ತದೆ. ದಯವಿಟ್ಟು ಕರ್ನಾಟಕ ಅರ್ಬನ್ ವಾಟರ್ ಸಪ್ಲೈನವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥಾದ್ದನ್ನು ಜಿಲ್ಲಾ ಪಂಚಾಯಿತಿಗೆ ವರ್ಗಾಹಿಸಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಕೊನೆಯದಾಗಿ, ಜಿಲ್ಲಾ ಪಂಚಾಯತ್‌ನ ರಸ್ತೆಗಳ ಬಗ್ಗೆ ಹೇಳುವುದಾದರೆ, ಬಹಳಷ್ಟು ಸಂಕಟವಾಗುತ್ತದೆ. ಇವೊತ್ತು ಹದಿನಾಲ್ಕು ತಿಂಗಳಾಯಿತು. ಜಿಲ್ಲಾ ಪಂಚಾಯತ್ ರಸ್ತೆಗಳಿಗೆ ಹಣವನ್ನು ಮತ್ತೆ ಒದಗಿಸುತ್ತಿಲ್ಲ. ಅಲ್ಲಿರತಕ್ಕ asphalted road ಅನ್ನು ಪಿಡಬ್ಲ್ಯೂಡಿಗಾದರೂ ವರ್ಗಾಯಿಸಿದರೆ, ಅವರಾದರೂ ಸ್ವಲ್ಪ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಜಿಲ್ಲಾ ಪಂಚಾಯತ್ ರೋಡಿಗೆ ಕಿಲೋಮೀಟರ್ ಮೇಲೆ ಹಣ ಒದಗಿಸಿದರೆ ಮಾತ್ರ ಅಲ್ಲಿನ ಜನರು ಹೋಗುವುದಕ್ಕೆ ಸಾಧ್ಯವಿದೆ. ಹಳ್ಳಿಗಾಡು ಪ್ರದೇಶದಲ್ಲಿರುವ ಮೇನ್ ರೋಡಿಗೆ

ಕೂಡಿಸುವ ಏನು ರೋಡುಗಳಿವೆ, ಅವೆಲ್ಲವೂ ಕೆಟ್ಟುಹೋಗಿವೆ. ಅಲ್ಲಿ ಗುಂಡಿಗಳು ಬಿದ್ದಿವೆ, ಸಾಕಷ್ಟು ಪ್ರಮಾಣದಲ್ಲಿ ಅರಣ್ಯ ಬೆಳೆದಿದೆ. ಅದನ್ನು ಸರಿಪಡಿಸುವುದಕ್ಕೆ ಕಿಲೋಮೀಟರ್ ಮೇಲೆ ಜಿಲ್ಲಾ ಪಂಚಾಯತ್ ರೋಡಿಗೆ ದಯವಿಟ್ಟು ಹಣ ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಕೊನೆಯದಾಗಿ, ಯಲ್ಲಮ್ಮ ಗುಡ್ಡದ ಕ್ಷೇತ್ರ ನನ್ನ ತಾಲ್ಲೂಕಿನಲ್ಲಿ ಬರುವುದರಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ದಯವಿಟ್ಟು ಸ್ವಲ್ಪ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಜಾತ್ರೆ ಸಮಯದಲ್ಲಿ ಏನಾಗುತ್ತದೆಂದರೆ, ಮಹಾರಾಷ್ಟ್ರದಿಂದ ಸಾಕಷ್ಟು ಬಸ್ಸುಗಳು ಬರುತ್ತವೆ. ಕರ್ನಾಟಕದ ಮೂಲೆ-ಮೂಲೆಗಳಿಂದ ಬಸ್ಸುಗಳು ಬರುತ್ತವೆ. ನಾಲ್ಕು ತಾಸುಗಳಷ್ಟು ಟ್ರಾಫಿಕ್ ಜಾಮ್ ಆಗುತ್ತಿದೆ. ಅದನ್ನು ನಿರ್ವಹಣೆ ಮಾಡುವುದಕ್ಕೆ ಅಲ್ಲಿ ದೊಡ್ಡದೊಂದು ಬಸ್ ಸ್ಟಾಂಡ್ ನಿರ್ಮಾಣ ಮಾಡಬೇಕು. ಆ ಬಸ್ ಸ್ಟಾಂಡ್‌ನಲ್ಲಿ ಬಸ್ಸುಗಳು, ಪ್ರೈವೇಟ್ ವೆಹಿಕಲ್ಸ್ ನಿಲ್ಲುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದರೆ ಟ್ರಾಫಿಕ್ ಸುಗಮವಾಗಿ ಸಾಗಬಹುದು ಎಂಬ ಮಾತನ್ನು ಹೇಳುತ್ತಾ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* **ಶ್ರೀ ವೀರಬಸವಂತರೆಡ್ಡಿ ಮುದ್ನಾಳ್ (ಯಾದ್‌ಗಿರ್):** ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ, ಸಂಸದೀಯ ವ್ಯವಹಾರ, ಆರೋಗ್ಯ ಹಾಗೂ ನೀರಾವರಿಯ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳುತ್ತೇನೆ. ಸಂಸದೀಯ ವ್ಯವಹಾರ: ಸದನದ ನಡವಳಿಕೆಯ ಬಗ್ಗೆ ನನ್ನ ಕೆಲವು ವಿಚಾರಗಳನ್ನು ತಮ್ಮಲ್ಲಿಡುತ್ತೇನೆ. ಮೊದಲನೆಯದು, ಈಗ ನೋಡುತ್ತಿದ್ದೇವೆ, ಇದು ಕೊನೆಯ ದಿವಸ, ಐದೈದು ನಿಮಿಷ ಮಾತನಾಡಿ ಎಂದರೆ, ಬಹಳ ವೇಗದಲ್ಲಿ ನಾವು ಹೋಗುತ್ತೇವೆ. ಇದನ್ನೇ ನಾವು ಮೊದಲಿನಿಂದಲೇ ಮಾಡಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆ. ನನಗೇನು ಅನ್ನಿಸುತ್ತದೆ ಎಂದರೆ, ನಾಲ್ಕು ತಾಸು, ಐದು ತಾಸು Assembly ನಲ್ಲಿ ಮಾತನಾಡಿದರೆ that has become a prestige. ನಾವು ಹೇಳುವುದು ಇಷ್ಟೆ what you can convey in four hours, you can convey in twenty minutes. A time perhaps has come when we have to reduce this long talk Secondly, the same topic is discussed by four, five people, each will spend one hour for the same topic. ಅದಕ್ಕಾಗಿ I think we must take a decision that repetition should not be there or it should be very minimum. Unless the members are told time has become very precious now we spend ಎಷ್ಟು ಜನ ಐದು ತಾಸು average on a day . . . . .

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅದರ ಬಗ್ಗೆ ನನ್ನ ಅಭಿಪ್ರಾಯ ಬೇರೆ ಇದೆ. ಅದರ ಅಭಿಪ್ರಾಯವೇ ಬೇರೆ ಇರುತ್ತದೆ. ಯಾವುದೋ ಒಂದು ವಿಷಯದ ಬಗ್ಗೆ ಅವರೇನು ಅಭಿಪ್ರಾಯವನ್ನು ಕೊಡುತ್ತಾರೆ, ನನ್ನ ಅಭಿಪ್ರಾಯ ಬೇರೆ ಇದ್ದಾಗ ಒಂದೇ ಸಬ್ಜೆಕ್ಟ್‌ನಲ್ಲಿ ಎಲ್ಲರೂ ಮಾತನಾಡಬಾರದು ಎಂದರೆ ಅದು ತಪ್ಪಾಗುತ್ತದೆ. ಅಭಿಪ್ರಾಯಗಳು ಬೇರೆ ಇರುವಾಗ ಅವರವರ ಅಭಿಪ್ರಾಯಗಳನ್ನು ಅವರವರು ಹೇಳಲು ಅವಕಾಶ ಇದೆ.

---

* **ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಣಗೊಂಡಿದೆ.**

ಶ್ರೀ ವೀರಬಸವಂತರೆಡ್ಡಿ ಮುದ್ನಾಳ್: ನಾನು ಹೇಳುವುದು ಇಷ್ಟೆ, ನೀವು ಮಾತನಾಡಿ ಆದರೆ repeat ಮಾಡಬೇಡಿ, same thoughts. You add information. That should be the one.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಡೆಮಾಕ್ರಸಿಯಲ್ಲಿ different political parties constitute the House. Different political parties will have a different view on every issue. How can you expect that? ಅದು ಹೇಗೆ ಸಾಧ್ಯವಾಗುತ್ತದೆ?

ಶ್ರೀ ಆರ್. ರೋಷನ್‌ಬೇಗ್: ಅವರು ಹೇಳುತ್ತಿರುವುದು front benchers ಒಬ್ಬೊಬ್ಬ speaker ಐದೈದು ಗಂಟೆ ತೆಗೆದುಕೊಳ್ಳಬೇಡಿ ಎಂದು.

ಶ್ರೀ ವೀರಬಸವಂತರೆಡ್ಡಿ ಮುದ್ನಾಳ್: ನಾನು front benchers ಎಂದು ಹೇಳಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆ ಪ್ರಶ್ನೆ ಬೇರೆ. ಐದು ಗಂಟೆ ಮಾತನಾಡಿದ ಇತಿಹಾಸ ಈ ಸದನದಲ್ಲಿ ಯಾರಿಗೂ ಇಲ್ಲ, ಸುಳ್ಳು ಏಕೆ ಹೇಳುತ್ತೀರಿ ನೀವು?

Sri Veerabasavantha Reddy Mudnal: Sir, let me finish.

ಶ್ರೀ ಆರ್. ರೋಷನ್ ಬೇಗ್: ಮೂರು ಮೂರು ನಾಲ್ಕು ನಾಲ್ಕು ಗಂಟೆ ಮಾತನಾಡಿರುವುದನ್ನು ನಾವು ನೋಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈ ವಿಚಾರ ಸರಿಯಲ್ಲ. ನೀವು ಆ ರೀತಿ ಮಾತನಾಡಬಾರದು, ಈ ರೀತಿ ಮಾತನಾಡಬಾರದು ಎಂದು ನಿರ್ಬಂಧ ಮಾಡತಕ್ಕದ್ದು ಸರಿಯಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡುರಾವ್: ಅವರು ಅವರ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದಾರೆ, ಅದರಲ್ಲಿ ತಪ್ಪೇನಿದೆ? ಅವರ ಅಭಿಪ್ರಾಯ ಹೇಳಲಿ ಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳು ಆಯ್ಕೆಯಾಗುತ್ತವೆ. ರಾಜಕೀಯ ಪಕ್ಷಗಳಲ್ಲಿ ಅವರವರ ಅಭಿಪ್ರಾಯಗಳು ಬೇರೆ ಬೇರೆ ಇರುತ್ತವೆ. ಆ ರೀತಿಯೆಲ್ಲ ನೀವು ಅಭಿಪ್ರಾಯ ವ್ಯಕ್ತಪಡಿಸತಕ್ಕದ್ದು ಸರಿಯಲ್ಲ.

ಶ್ರೀ ವೀರಬಸವಂತರೆಡ್ಡಿ ಮುದ್ನಾಳ್: ಮಾನ್ಯ ಅಧ್ಯಕ್ಷರೆ, ನನ್ನ ವಿಚಾರ ಇಷ್ಟೆ: ಎಲ್ಲರಿಗೂ ಸಮಯ ಸಿಗಬೇಕು. What we can tell in four hours, what we can tell in one hour we can tell in twenty minutes. ಅದನ್ನು ನಾನು ಹೇಳಲು ಹತ್ತಿದ್ದೇನೆ, ಯಾರೂ ಮಾತನಾಡಬಾರದು ಎಂಬ ಬಗ್ಗೆ ನನ್ನ ಆಕ್ಷೇಪವಿಲ್ಲ. ಎರಡನೆಯದು there are 224 Members here. ಐದು ತಾಸಿನಲ್ಲಿ ತಾವು ಒಂದೊಂದು ಗಂಟೆ ಕೊಟ್ಟರೆ ಐದೇ ಮಂದಿ ಮಾತನಾಡಬಹುದು. ಅದನ್ನೇ ನೀವು ಹತ್ತು ನಿಮಿಷ ಮಾತನಾಡಿದರೆ ಮೂವತ್ತು ಮಂದಿ ಮಾತನಾಡಬಹುದು. Why don't you give chance to everybody? A time has come when time has become very valuable. We have to see that everybody gets an opportunity. ಆ ಸಮಯದ ಒಂದು importance ನಿಂದ Assembly ನಡೆಯಬೇಕಾಗುತ್ತದೆ ಎಂದು ನಾನು ಸಂಸದೀಯ ವ್ಯವಹಾರಗಳ ಮಂತ್ರಾಲಯಕ್ಕೆ ತಿಳಿಸುತ್ತೇನೆ. ಎರಡನೆಯದು, Health, ನಾನು ಬಹಳ ಹೇಳಿದ್ದೇನೆ, ಮೂರು ದಿವಸಗಳಿಂದ ಹೆಲ್ತ್ ಬಗ್ಗೆ ಮಾತನಾಡಿದ್ದೇವೆ. ಆದರೆ ಅದನ್ನು

ನಾನು ರಿಪೀಟ್ ಮಾಡಲು ಹೋಗುವುದಿಲ್ಲ. I have to add only two points. ನಮ್ಮ ಯಾದಗಿರಿಯ ಆಸ್ಪತ್ರೆಯಲ್ಲಿ ಆಪರೇಷನ್ ಥಿಯೇಟರ್ ಇದೆ, ಎಲ್ಲಾ ಎಕ್ಯುಪ್‌ಮೆಂಟ್ಸ್ ಇದೆ, ಸರ್ಜನ್ ಇದ್ದಾರೆ. ಆದರೆ Anaesthetist ಇಲ್ಲ. So we cannot operate; ಅಲ್ಲಿಂದ ಗುಲ್ಬರ್ಗಾಕ್ಕೆ ಕಳುಹಿಸಬೇಕು. ಅದಕ್ಕಾಗಿ ಎಲ್ಲೆಲ್ಲಿ ನಾವು ಆಸ್ಪತ್ರೆ ಕಟ್ಟಿಸಿ ಆಪರೇಷನ್ ಥಿಯೇಟರ್ ಮಾಡುತ್ತೇವೆ ಅಲ್ಲಿಗೆ Anaesthetist ಪೋಸ್ಟ್ ಮಾಡಿದರೆ ಅಲ್ಲಿದ್ದ ಸರ್ಜನ್‌ರವರ ಉಪಯೋಗವಾಗುತ್ತದೆ. ಇಲ್ಲದಿದ್ದರೆ ಸರ್ಜನ್ ಅಲ್ಲಿದ್ದೂ ವೇಸ್ಟ್ ಆಗಿಬಿಡುತ್ತದೆ. ಎರಡನೆಯದು, ಸರ್ಕಾರದ ಕಡೆಯಿಂದ ಟ್ಯುಬ್ಯಾಕ್ಟಮಿ ಆಪರೇಷನ್ ಮಾಡಲು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಪರ್ಮಿಷನ್ ಕೊಟ್ಟಿದ್ದೀರಿ. ಅದೇ ರೀತಿ ಟ್ಯುಬ್ಯಾಕ್ಟಮಿ ಆಪರೇಷನ್ ಖಾಸಗಿ ನರ್ಸಿಂಗ್ ಹೋಂನಲ್ಲಿ ಸಹ ಮಾಡಿಕೊಳ್ಳಬಹುದು ಎಂದು ಆದೇಶ ಹೋಗಿದೆ. ಆದರೆ ಈ ಟ್ಯುಬ್ಯಾಕ್ಟಮಿ ಆಪರೇಷನ್ ಮಾಡುವಾಗ ಏನಾದರೂ ಸರ್ಕಾರಿ ಆಸ್ಪತ್ರೆಯಲ್ಲಿ ಅನಾಹುತವಾದರೆ ಅವರಿಗೆ ಪರಿಹಾರ ಸಿಗುತ್ತದೆ. ಆದರೆ ಖಾಸಗಿ ನರ್ಸಿಂಗ್ ಹೋಂನಲ್ಲಿ ಆದರೆ ಅವರಿಗೆ ಪರಿಹಾರ ಸಿಗುವುದಿಲ್ಲ. ನಾನು ಹೇಳುವುದೇನೆಂದರೆ, ನೀವು ಖಾಸಗಿ ಆಸ್ಪತ್ರೆಗಳಲ್ಲಿ ಆಪರೇಷನ್ ಮಾಡಿಸಿಕೊಳ್ಳಬಹುದು ಎಂದು ಪರ್ಮಿಷನ್ ಕೊಟ್ಟಿದ್ದೀರಿ. ನಮ್ಮ ಶಹಪುರದಲ್ಲಿ ಒಂದು ಘಟನೆ ಆಗಿದೆ. One lady has died. The family is not getting any compensation. ಏಕೆಂದರೆ, ಪ್ರೈವೇಟ್ ನರ್ಸಿಂಗ್ ಹೋಂನಲ್ಲಿ ಆಪರೇಷನ್ ಮಾಡಿಸಿದ್ದೀರಿ; ಆದ್ದರಿಂದ ನಾವು compensation ಕೊಡುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಇದೊಂದು ಸೀರಿಯಸ್ ಇಶ್ಯೂ, ದಯಮಾಡಿ ಯಾವಾಗ ಟ್ಯುಬ್ಯಾಕ್ಟಮಿ ಆಪರೇಷನ್ ಮಾಡಿಸಲು ಅವರಿಗೆ ಎಲ್ಲಾ ಸೌವಲತ್ತು ಕೊಡುತ್ತೀರಿ, Private nursing home ನವರಿಗೆ ಏನು ಪರ್ಮಿಷನ್ ಕೊಟ್ಟಿದ್ದೀರಿ ಅಲ್ಲಿ ಅನಾಹುತವಾದರೆ ನಾವು compensation ಕೊಡಲೇಬೇಕಾಗುತ್ತದೆ. ಮೂರನೆಯದು, ಇರಿಗೇಷನ್ ಬಗ್ಗೆ ಹೇಳುವುದಾದರೆ, ಮಾನ್ಯ ನೀರಾವರಿ ಮಂತ್ರಿಗಳಿದ್ದಾರೆ, ಯಾದಗಿರಿಯ ಕೊನೆಯ ಕಾಲುವೆ, ಕೊನೆಯ ಹಂತದ ಕಾಲುವೆಯವರಿಗೆ ಯಾವಾಗಲೂ ನೀರು ಸಿಗುವುದು ಸ್ವಲ್ಪ ತ್ರಾಸ ಇದೆ. ಏಕೆ ನಮಗೆ ನೀರು ಬರುವುದಿಲ್ಲವೆಂದರೆ, ಮೇಲಿನ ಹಂತದವರು ಹೆಚ್ಚಿಗೆ ನೀರನ್ನು ಉಪಯೋಗ ಮಾಡುತ್ತಾರೆ. ಯಾವುದಕ್ಕೆ ಉಪಯೋಗ ಮಾಡುತ್ತಾರೆ, ಅಲ್ಲಿ ಭತ್ತ ಬೆಳೆಯುತ್ತಾರೆ. ಈಗ ಏನಾಗಿದೆ ಎಂದರೆ ಮೇಲಿನವರಿಗೂ ಕೆಳಗಿನವರಿಗೂ ಸಂಘರ್ಷ ನಡೆದಿದೆ. ಯಾದಗಿರಿ, ಸುರ್‌ಪುರ ಮತ್ತು ಶಹಪುರ್‌ದಲ್ಲಿ. ನಮಗೆ ರೈತರ ಸಂಘರ್ಷ ಬೇಡ. ನಮಗೆ ನೀರು ಕೊಡಿ ಸಾಕು. What you do is not our lookout. ನಾವು ಕೇಳುವುದು ಕೆನಾಲ್ ಕೊನೆಯವರಿಗೆ ನೀರು ಕೊಡಿ. ಇದಕ್ಕೆ ಹೇಗೆ ಮಾಡಬಹುದು ನಾವು? There are various loopholes. ಇದರಲ್ಲಿ officials ನವರದ್ದೂ there is lack of involvement, farmers themselves put unnecessary either holes inside or put pumps in-between. ಇದು ಎಲ್ಲಾ ಕಡೆ ಇದೆ. It is not one man's blame. ಅದಕ್ಕಾಗಿ ಸರ್ಕಾರ ಇವರ ನಡುವೆ ಬಂದು, ರೈತರ ಗುಂಪು ಮತ್ತು officials ಇಬ್ಬರೂ ಸಂಘರ್ಷ ಮಾಡದಂತೆ ಕೊನೆಯ ಹಂತಕ್ಕೆ ನೀರು ತಲುಪಿಸಬೇಕೆಂದು ಕೋರಿ ನನಗೆ ಮಾತನಾಡಲು ಸಮಯ ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಐವಾನ್ ನಿಗ್ಲಿ (ನಾಮನಿರ್ದೇಶನ ಹೊಂದಿದವರು): ಮಾನ್ಯ ಅಧ್ಯಕ್ಷರೆ, ರೆಕಾರ್ಡ್ ಮಾಡುವಾಗ ಒಂದು ತಪ್ಪಾಗುತ್ತದೆ, ಮಾನ್ಯ ಸದಸ್ಯರು ಮಾತನಾಡುವಾಗ 224 ಜನ ಸದಸ್ಯರು ಎಂದು ಹೇಳಿದರು. ಆದರೆ 224 ಅಲ್ಲ, 225 ಎಂದು ಆಗಬೇಕು. ಮೊನ್ನೆ ಒಂದು ಸಲ ಮಾನ್ಯ ಯಡಿಯೂರಪ್ಪನವರು ಇದೇ ರೀತಿ 224 ಎಂದು ಹೇಳಿದ್ದರು. ಆದರೆ 225 ಸದಸ್ಯರು ಇದ್ದಾರೆ.

ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಡಲು ರೆಡಿ ಇದ್ದೇನೆ. ಕಂದಾಯ ಇಲಾಖೆಯ ಬೇಡಿಕೆಯ ಮೇಲೆ ಮಾನ್ಯ ಸದಸ್ಯರು ಅನೇಕರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಆನೇಕಲ್ ಕ್ಷೇತ್ರದ ಶ್ರೀಮಾನ್ ನಾರಾಯಣ್‌ಸ್ವಾಮಿಯವರು, ಜೀವಿಜಯರವರು, ಜಯಪ್ರಕಾಶ್ ಹೆಗ್ಡೆಯವರು ಮತ್ತು ಬೇರೆ ಬೇರೆ ಸದಸ್ಯರು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹೀಗೆ ಅನೇಕ ವಿಷಯಗಳನ್ನು ಹೇಳುವುದರ ಜೊತೆಗೆ ಬೇರೆ ಬೇರೆ ಸಂದರ್ಭದಲ್ಲಿ ನಿಲುವಳಿ ಸೂಚನೆಯನ್ನು ಮಂಡಿಸಿದಂಥ ಸಂದರ್ಭದಲ್ಲಿ ಅದು ನಿಯಮ 69ಕ್ಕೆ ಪರಿವರ್ತನೆಯಾಗಿ ಚರ್ಚೆಗೆ ಬರತಕ್ಕದ್ದು ಆಯಿತು. ಅದಾದ ನಂತರ ವಿವಿಧ ಸಂದರ್ಭಗಳಲ್ಲಿ ಶಾಸಕರು ಪ್ರಶ್ನೆಗಳನ್ನು ಕೇಳಿದಾಗ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿರತಕ್ಕದ್ದು ಕೂಡ ಇದರಲ್ಲಿ ಬಹಳ ಮುಖ್ಯವಾಗಿರತಕ್ಕದ್ದು ಇದೆ. ಇತ್ತೀಚಿನ ದಿನಮಾನಗಳಲ್ಲಿ ನೋಂದಾವಣೆ ಇಲಾಖೆಯ ಮೂಲಕ ಯಾವುದು ಪರಿವರ್ತಿತವಾದಂಥ ಭೂಮಿ ಇದೆ ಅದಕ್ಕೆ ಅಧಿಕೃತವಾಗಿರತಕ್ಕಂಥ ಪರವಾನಗಿಯನ್ನು ಪಡೆಯಲಾರದೆ ಇರತಕ್ಕ ಸಂದರ್ಭಗಳಲ್ಲಿ ಅವುಗಳ ನೋಂದಾವಣೆಯಾಗಬಾರದು ಎಂದು ಬಹಳ ಜನಗಳಲ್ಲಿ ಆತಂಕವನ್ನು ಉಂಟುಮಾಡಿದೆ. ಅನೇಕ ಸದಸ್ಯರು ಕೆಳಮನೆಯಲ್ಲಿ, ಮೇಲ್ಮನೆಯಲ್ಲಿ, ಪತ್ರಿಕೆಗಳಲ್ಲಿ ಈ ವಿಷಯದಲ್ಲಿ ಚರ್ಚೆ ಮತ್ತು ಅದರ ಬಗ್ಗೆ ಟೀಕೆ ಟಿಪ್ಪಣಿ, ಮೆಚ್ಚುಗೆ, ಸಂಪಾದಕೀಯದ ಮೂಲಕ ಮೆಚ್ಚುಗೆ ಈ ರೀತಿ ಅನೇಕ ವಿಷಯಗಳು ಪ್ರಸ್ತಾಪಿಸಲ್ಪಟ್ಟಿದೆ. ಅದರಲ್ಲಿ ಬಹು ಮುಖ್ಯವಾಗಿ ಪ್ರಸ್ತಾಪ ಮಾಡಿರುವಂಥದ್ದು ಮಾನ್ಯ ಮಾಜಿ ಪ್ರಧಾನಿಗಳಾದಂಥ ಶ್ರೀಮಾನ್ ದೇವೇಗೌಡರು ಬೇರೆ ಬೇರೆ ಅಂಶಗಳಲ್ಲಿ 45 ಸಾವಿರ ಎಕರೆಯಷ್ಟು ಜಮೀನು ಭೂ ಕಬಳಿಕೆಯಾಗಿದೆಯೆಂದು ಪ್ರಸ್ತಾಪ ಮಾಡುತ್ತಾರೆ. ನೀವು ಒಂದೊಂದು ಸಲ ಬೇರೆ ಬೇರೆ ವಿಚಾರಗಳನ್ನು ಹೇಳುತ್ತೀರಿ. ಈ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನಿದೆ ಎಂಬುದು ಬಹಳ ಗೊಂದಲಕಾರಿ ಆತಂಕಕಾರಿಯಾಗಿರತಕ್ಕಂಥ ವಿಚಾರವಾಗಿದೆ. ಅದು ಕುರುಡ ಆನೆಯನ್ನು ಮುಟ್ಟಿದಂಥ ರೀತಿಯಲ್ಲಿ ವರ್ಣನೆಗಳು ಆಗಿದೆ. ಸೊಂಡಿಲು ಮುಟ್ಟಿದವನು ಸೊಂಡಿಲೇ ಆನೆ ಎಂದು ಭಾವಿಸಿದಂಥವನು, ಬಾಲ ಮುಟ್ಟಿದವನು ಬಾಲವೇ ಆನೆ ಎಂದು ಪರಿಭಾವಿಸಿದಂಥ ರೀತಿಯಲ್ಲಿ ಒಂದು ವಿಕೃತಿ ರೂಪದಲ್ಲಿ ಈ ವಿಚಾರಗಳು ಪ್ರಸ್ತಾಪಿಸಲ್ಪಟ್ಟಿದೆ. ನಾನು ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಿದಾಗ 6–3–2005ರಂದು . .

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆ ಬಹಳ ಮುಖ್ಯವಾದಂಥ ಇಲಾಖೆ, ಬಹಳಷ್ಟು ಶಾಸಕರು ಮತ್ತು ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ನಾನು ತಮ್ಮ ಮೂಲಕ ಅಪೀಲ್ ಮಾಡುತ್ತಿದ್ದೇನೆ, ಈಗಾಗಲೇ ನಮ್ಮ ಹಿರಿಯ ಸಚಿವರಾದಂಥ ಕಂದಾಯ ಸಚಿವರು ಈಗ ಉತ್ತರ ಕೊಡುತ್ತಿದ್ದಾರೆ. ನಾವೆಲ್ಲರೂ ಕೂಡ ವಿರೋಧ ಪಕ್ಷದ ನಾಯಕರೂ ಬರಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ತಾವೂ ಕೂಡ ಸ್ವಲ್ಪ ಮನವಿ ಮಾಡಿ ಕರೆಸಿದರೆ ಒಳ್ಳೆಯದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಒಂದು ಐದು ನಿಮಿಷ ಸದನವನ್ನು ಮುಂದಕ್ಕೆ ಹಾಕಿ ಅವರನ್ನು ಕರೆಸಿದರೆ ಒಳ್ಳೆಯದು.

ಶ್ರೀ ಎಂ.ಪಿ. ಪ್ರಕಾಶ್: ಹಾಗಿದ್ದರೆ ನಾಳೆಯೇ ಉತ್ತರ ಕೊಡುತ್ತೇನೆ. ಈಗ ಬೇರೆ ಇಲಾಖೆಯದು ಆಗಲಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಯಾವುದೇ ಉತ್ತರ ಕೊಡುವಾಗ ಅವರೆಲ್ಲರೂ ಒಳಗೆ ಇದ್ದರೆ ಒಳ್ಳೆಯದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ದಯವಿಟ್ಟು ಹಿಂದಕ್ಕಾದರೂ ಕರೆಸಿ, ಮುಂದಕ್ಕಾದರೂ ಕರೆಸಿ, ಇಲ್ಲದಿದ್ದರೆ ತಾವು ಕರೆದು ಮಾತನಾಡಿ. ಏಕೆಂದರೆ ಉತ್ತರ ಬಹಳ ಮುಖ್ಯವಾದಂಥ ವಿಚಾರಗಳ ಬಗ್ಗೆ ಇದೆ.

ಶ್ರೀ ತನ್ವೀರ್ ಸೇಠ್: ಏನೂ ವಿಚಾರಗಳು ಇಲ್ಲದೆಯೇ ಅವರುಗಳು ಹೊರಗೆ ಹೋದಂಥ ಸಂದರ್ಭದಲ್ಲಿ . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇದೆಲ್ಲಾ ಸಹಜ ಬಿಡಿ. ಅದೆಲ್ಲಾ ಇರುತ್ತದೆ.

ಶ್ರೀ ತನ್ವೀರ್ ಸೇಠ್: ಇಲಾಖೆಯ ವಿಚಾರದಲ್ಲಿ ಮಾತನಾಡುವಂಥ ಸಂದರ್ಭದಲ್ಲಿ ಚರ್ಚೆಗೆ ದೂರವಾಗಿರುವಂಥ ವಿಚಾರವನ್ನು ತಾವು ಹೇಳಿದ್ದೀರಿ. ನಮಗೆ ನಮ್ಮ ವಿಚಾರಗಳನ್ನು ವ್ಯಕ್ತಮಾಡಲು ಬಿಡಿ.

ಅಧ್ಯಕ್ಷರು: ನಾನು ಒಳಗಡೆ ಹೋಗಿ ಅವರನ್ನು ಕರೆಸಿ ಮಾತನಾಡಿ . . .

ಶ್ರೀ ಎಸ್. ರಾಜೇಂದ್ರನ್: ನಾವು ಅವರಿಗೆ ಗೌರವ ಕೊಟ್ಟು ನಾಳೆ ಉತ್ತರ ಕೊಡಿಸೋಣ, ಇಲ್ಲದಿದ್ದರೆ ಇವತ್ತು ಐದು ನಿಮಿಷ ಸದನವನ್ನು ಮುಂದಕ್ಕೆ ಹಾಕಿ, ಅನಂತರ ಕಂಟಿನ್ಯೂ ಮಾಡೋಣ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: . . . . . ದಯವಿಟ್ಟು ಅವರನ್ನು ಕರೆಸಿ. ಒಂದೈದು ನಿಮಿಷ ಸದನವನ್ನು ಮುಂದೂಡಿ. ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಎಲ್ಲರನ್ನೂ ಬರಲಿಕ್ಕೆ ಹೇಳಿ. ಇದರಿಂದ ಸದನಕ್ಕೆ ಗೌರವ ಬರುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ಮುಖ್ಯವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಾಯಶಃ ಅವರು ಇಲ್ಲದಿರತಕ್ಕಂಥ ಸಭೆಯಲ್ಲಿ ನಾವು ಏನಾದರೂ ಒಂದು ಉತ್ತರವನ್ನು ಕೊಟ್ಟೆವು ಎನ್ನುವಂತಹ ಲೋಪ ಅಥವಾ ಆರೋಪ ನಮ್ಮ ಮೇಲೆ ಬರಬಾರದು. ಆದ್ದರಿಂದ, ಈಗ ಬೇಕಾದರೆ ಅವರನ್ನು ಕರೆಸಬಹುದು, ಇಲ್ಲದಿದ್ದರೆ ನಾನು ನಾಳೆ ಕೂಡ ಉತ್ತರ ಕೊಡಲಿಕ್ಕೆ ತಯಾರಿದ್ದೇನೆ. ಬೆಳಿಗ್ಗೆ ಅವರು ಬಂದಿರುತ್ತಾರೆ. ಇವತ್ತು ಅವರು . . . . .

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ತಾವು ಉತ್ತರ ಕೊಡುವಾಗ ಅವರೂ ಇರುವುದು ಒಳ್ಳೆಯದು ಎಂಬುದು ನಮ್ಮ ಅಭಿಪ್ರಾಯವಾಗಿದೆ.

(ಗೊಂದಲ)

ಅಧ್ಯಕ್ಷರು: ನಾಳೆ ಆಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ರೆಡ್ಡಿಯವರು ಇಲ್ಲೇ ಇದ್ದರು, ಮಾನ್ಯ ಹೆಗ್ಡೆಯವರೂ ಇಲ್ಲೇ ಇದ್ದರು, ನಾನೂ ಸಹ ಇಲ್ಲೇ ಕುಳಿತಿದ್ದೆ. Just, only for five minutes ನಾನು ನೀರು ಕುಡಿಯಲಿಕ್ಕೆಂದು ಹೊರಗಡೆ ಹೋಗಿದ್ದೆ. ನಾನೊಬ್ಬನಾದರೂ ಇಲ್ಲಿದ್ದೆ. ಎರಡು ಇಲಾಖೆಗಳು ನನ್ನ ವ್ಯಾಪ್ತಿಗೆ ಬರುತ್ತವೆ. Revenue Minister ಆ ಮನೆಗೆ ಹೋಗಿದ್ದರು. ಅಲ್ಲಿ ಅವರದೊಂದು bill ಇತ್ತು. ಅದನ್ನು ಪಾಸ್ ಮಾಡಿಕೊಳ್ಳಲಿಕ್ಕಾಗಿ ಅವರು ಅಲ್ಲಿಗೆ ಹೋಗಿದ್ದರು. ಸಂಬಂಧಪಟ್ಟಂತಹ ಬಾಕಿ ಇಲ್ಲಾ ಸಚಿವರೂ ಇಲ್ಲೇ ಇದ್ದರು. ಕಾರಣ ಇರಲಿಲ್ಲ. ನಾನು ಹೇಳುವುದೇನೆಂದರೆ, ಕಾರಣ ಇದ್ದು, ಏನಾದರೂ ಹೇಳಿದ್ದರೆ ಒಂದು ಮಾತು. ತಮಗೆ ಗೊತ್ತಿದೆ, ನಾವು ಮುಂಜಾನೆ ಬಂದಾಗಿನಿಂದ ಇಲ್ಲೇ ಕುಳಿತಿದ್ದೇವೆ, ಮಧ್ಯಾಹ್ನದ ಮೇಲೂ ಇಲ್ಲೇ ಕುಳಿತಿದ್ದೇವೆ. ಈಗಲೂ ಕೂಡ ಇಲ್ಲೇ ಇದ್ದೇವೆ. ಆದರೆ ಸುಮ್ಮಸುಮ್ಮನೆ ಮುನಿಸಿಕೊಂಡು ಹೋಗತಕ್ಕಂಥದ್ದು ಆಗಬಾರದು. ಏಕೆಂದರೆ, ಜನತೆಗೆ wrong message ಹೋಗಬಾರದು. ಯಾರೂ ಇರಲೇ ಇಲ್ಲ, ಎಲ್ಲರೂ ಸತ್ತಿದ್ದಾರೆ, ಎಂದು ಈ ರೀತಿ ಹೇಳುವುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನಾನು ಆಗಲೇ ಹೇಳಿದಂತೆ, ಅವರು ಹೈದರಾಬಾದ್‌ಗೆ ಹೋಗಿದ್ದರು. ಅದು ಅವರಿಗೆ ಗೊತ್ತಿದೆ. ಮಾನ್ಯ ಉಪ ಮುಖ್ಯಮಂತ್ರಿಗಳದ್ದು ಆರೋಗ್ಯದ ಸಮಸ್ಯೆ ಇದೆ. ಮಾನ್ಯ ದೇಶಪಾಂಡೆಯವರದು ಬಿಲ್ ಇತ್ತು. ಇವರದೂ ಕೂಡ ಅಲ್ಲಿ ಉತ್ತರ ಕೊಡುತ್ತಿದ್ದರು. Front bench ನಲ್ಲಿ ಇರತಕ್ಕಂಥ 4–5–6 ಜನ ಹೆಚ್ಚು ಕಡಿಮೆ ಒಂದಲ್ಲ ಒಂದು ಕಾರಣದಿಂದ ಮೇಲ್ಮನೆಯಿಂದ ಉಪಸ್ಥಿತರಿದ್ದರು ಅಥವಾ ಕೆಲವರು ಗೈರುಹಾಜರಿದ್ದರು. ಆದರೆ ಈಗ ಅನಾವಶ್ಯಕವಾಗಿ, ನಿಮ್ಮ ಉತ್ತರ ಕೇಳುವುದೇ ಬೇಡ ಎಂದು boycott ಮಾಡಿ ಹೋದರು. ನಾವೇನು ಮಾಡಲಿಕ್ಕಾಗುತ್ತದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದು ಆಗಿದೆ, ಇಂತಹದ್ದು ನಡೆಯುತ್ತಿರುತ್ತದೆ. ಇಂತಹ ಘಟನೆಗಳೆಲ್ಲಾ ಸದನದಲ್ಲಿ ನಡೆಯತಕ್ಕಂಥದ್ದು ಸಾಮಾನ್ಯ ಸಂಗತಿ. ದಯವಿಟ್ಟು ಒಂದೈದು ನಿಮಿಷ ಸದನವನ್ನು ಮುಂದೂಡಿ. ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಅವರನ್ನು ಕರೆಸಿ ಮಾತನಾಡಿ.

ಶ್ರೀ ಧರ್ಮಸಿಂಗ್: ನಾಳೆಯೇ appropriation bill ಪಾಸ್ ಆಗಬೇಕು. ಎಲ್ಲರೂ ಉತ್ತರ ಕೊಡಬೇಕು.

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ನಾನು ಈಗ ಛೇಂಬರ್‌ಗೆ ಹೋಗಿ, ಅವರನ್ನು ಕರೆಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳನ್ನೂ ಕೂಡ ಕರೆಸಿಕೊಂಡು ಮಾತನಾಡುತ್ತೇನೆ. ಉಳಿದವರು ಉತ್ತರ ಕೊಡುತ್ತಿರುತ್ತಾರೆ.

ಶ್ರೀ ಧರ್ಮಸಿಂಗ್: ಇಲ್ಲೇ ಹೇಳಬಹುದು.

ಅಧ್ಯಕ್ಷರು: ನಾನು ಛೇಂಬರ್‌ಗೆ ಹೋಗಿ ಅವರನ್ನು ಕರೆಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳನ್ನೂ ಸಹ ಕರೆಸುತ್ತೇನೆ. ಉತ್ತರ start ಆಗಲಿ, late ಆದರೆ ತೊಂದರೆಯಾಗುತ್ತದೆ.

(ಮಾನ್ಯ ಡಿ.ಆರ್. ಪಾಟೀಲ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಛೇರ್ಮನ್: ತಾವು ಉತ್ತರ ಕೊಡುವುದನ್ನು ಮುಂದುವರೆಸಿ.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಛೇರ್ಮನ್‌ರವರೆ, ದಿನಾಂಕ 6.3.2005ಕ್ಕೆ ಮಾನ್ಯ ದೇವೇಗೌಡರು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು, ಅದರ ಮೂಲಕ ಅವರು ಸರ್ಕಾರಿ ಜಮೀನಿನಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರಿ ಜಮೀನು ಹೊರತುಪಡಿಸಿ, ಅನಧಿಕೃತವಾಗಿ ಕಟ್ಟಿರುವ ಕಟ್ಟಡಗಳು, ಅವರಿಗೆ ಗೊತ್ತಿರತಕ್ಕಂಥ ಮಾಹಿತಿಯ ಆಧಾರದ ಮೇಲೆ 24,042 ಮತ್ತು 1,664 ಎಂದು ಹೇಳಿ, ಅದು ಎಕರೆ ವಿಸ್ತೀರ್ಣ ಆಗಿರತಕ್ಕಂಥದ್ದು, ಹಾಗೆಯೇ ಖಾಸಗಿ ಜಮೀನುಗಳಲ್ಲಿ ಭೂ ಕಂದಾಯದ ಅಧಿನಿಯಮದ ಕಲಂ 95ರಲ್ಲಿ ಉಲ್ಲಂಘನೆ ಮಾಡಿರುವ ಅನಧಿಕೃತವಾಗಿ ಕಟ್ಟಿರುವ ಕಟ್ಟಡಗಳು 7,304, ವಾಸದ ಉದ್ದೇಶಕ್ಕಾಗಿ 12,533 ಎಕರೆ, ವಾಣಿಜ್ಯ ಕೈಗಾರಿಕಾ ಉದ್ದೇಶಕ್ಕಾಗಿ 1833 ಎಕರೆ, 18 ಕಿ.ಮೀ. ಫಾಸಲೆಯೊಳಗೆ ಬರುವ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸಾಗುವಳಿ ಸಕ್ರಮೀಕರಣಕ್ಕೆ ನಮೂನೆ 59, ಮತ್ತು 53ರಲ್ಲಿ ಅರ್ಜಿ ಸಲ್ಲಿಸಿರುವ ಪ್ರಕರಣಗಳು 6334. ಅಲ್ಲಿ ಇದ್ದಂತಹ ಜಮೀನು 10,854,34 ಎಕರೆ ಸರ್ಕಾರಿ ಜಮೀನಿನಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಅನಧಿಕೃತವಾಗಿ ಬಳಕೆಯಾಗಿರತಕ್ಕಂಥದ್ದು 79 ಪ್ರಕರಣ, ಅದರಲ್ಲಿ 49 ಎಕರೆ 38 ಸೆಂಟ್ಸ್, ಗುಂಟೆ. ಸರ್ಕಾರಿ ಜಮೀನಿನಲ್ಲಿ ಅಕ್ರಮ ದಾಖಲೆ ಸೃಷ್ಟಿಸಿರುವಂತಹ ಪ್ರಕರಣಗಳು 208. 1273.22 ಗುಂಟೆಗಳು. (ಎ) ಖರಾಬು ಜಮೀನು 44,091 ಪ್ರಕರಣಗಳು, 11,653.29 ಗುಂಟೆ, (ಬಿ) ಖರಾಬು ಜಮೀನುಗಳು 23,668 ಪ್ರಕರಣಗಳು 5692 ಎಕರೆ, ಭೂ ಕಂದಾಯ ಅಧಿನಿಯಮದ 1964ರ ಕಲಂ 94(ಸಿ) ಅಡಿಯಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾದ ವಾಸದ ಮನೆಗಳ ನಿರ್ಮಾಣ, 30'X40' ಅಳತೆಯ 25 ಸಾವಿರ ನಿವೇಶನಗಳು 537 ಎಕರೆ, 40'X60' ಅಳತೆಯ 9871 ನಿವೇಶನಗಳು 440, 50'X80' ಅಳತೆಯ 5 ಸಾವಿರ ನಿವೇಶನಗಳು . . . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಸಚಿವರೆ, ಈಗ ತಾವು ಭೂ ಹಗರಣದ ಬಗ್ಗೆ ಉತ್ತರ ಹೇಳುತ್ತಿದ್ದೀರಿ. ಆ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಲಿಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಾರೆ. ಅದಕ್ಕೆ ನೀವು ಈಗಲೇ ಉತ್ತರ ಹೇಗೆ ಕೊಡುತ್ತೀರಿ? ಭೂ ಹಗರಣದ ಬಗ್ಗೆ ಚರ್ಚಿಸುವ ವಿಷಯ ಅಜೆಂಡಾದಲ್ಲಿದೆ, ಆ ಬಗ್ಗೆ ಚರ್ಚಿಸಲು ಮಾನ್ಯ ಅಧ್ಯಕ್ಷರು ಟೈಮ್ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ಈಗಾಗಲೇ ಆ ವಿಷಯವನ್ನು ನಿಯಮ 69ರ ಅಡಿಯಲ್ಲಿ ಚರ್ಚಿಸಬೇಕಾಗಿರುವುದರಿಂದ, ಅದನ್ನು ಬಿಟ್ಟು ಮಾನ್ಯ ಸಚಿವರು ಉತ್ತರ ಕೊಡುವುದು ಒಳ್ಳೆಯದು ಎಂದು ಕಾಣುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಛೇರ್ಮನ್‌ರವರೆ, ಇದು ನಮ್ಮ ವಿತ್ತೀಯ ಗೊತ್ತುವಳಿಯ ಸಂದರ್ಭದಲ್ಲಿ ನಿಯಮ 69ರ ಕೆಳಗೆ ಪರಿವರ್ತನೆ ಮಾಡುವ ಸಂದರ್ಭಗಳಲ್ಲಿಯೂ ಕೂಡ ತಾವು ಮನವೊಲಿಸುವಂತಹ ವಿಚಾರ ಎಂದು ಹೇಳಿ, ಈ ವಿಚಾರಗಳನ್ನೆಲ್ಲಾ ಪ್ರಸ್ತಾಪ ಮಾಡಿದ್ದೀರಿ. 200 ಕೋಟಿ ರೂಪಾಯಿಗಳ ಡೀಲ್ ಆಗಿದೆ ಎನ್ನುವಂತಹ ಆಪಾದನೆಗಳನ್ನೂ ಸಹ ಮಾಡಿದ್ದೀರಿ. ರಾಜೀನಾಮೆ ಕೊಡಬೇಕು ಎನ್ನತಕ್ಕಂಥ ವಿಷಯಗಳನ್ನೂ ಕೇಳಿದ್ದೀರಿ. ನಿಯಮ 69ರ ಅಡಿ ಚರ್ಚೆಗೆ ಬರುತ್ತದೆ ಎನ್ನತಕ್ಕಂಥದ್ದರ ಬಗ್ಗೆ ನಮಗೆ ಖಾಯಂ ಇಲ್ಲ. ಅದು ಎಂದು ಬರುತ್ತದೆ ಎನ್ನತಕ್ಕಂಥದ್ದರ ಬಗ್ಗೆ ಖಾಯಂ ಇಲ್ಲ. ಇರತಕ್ಕಂಥದ್ದು ಇದೊಂದೇ ಅಧಿವೇಶನ. ಈಗ ನೀವು ಆರೋಪಗಳನ್ನು ಮಾಡಿರತಕ್ಕಂಥದ್ದು ಇದೆ. ಅದಕ್ಕೆ ನಾವು ಉತ್ತರ ಕೊಡಬೇಕಾದಂತಹ ಅಗತ್ಯತೆ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಪ್ರಕಾಶ್‌ರವರೆ, ಒಂದು ನಿಮಿಷ. ನಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿದಾಗ ಮಾನ್ಯ ಅಧ್ಯಕ್ಷರು, ಈ finance bill pass ಆದಮೇಲೆ Rule 69ರ ಅಡಿಯಲ್ಲಿ ಯಾವ್ಯಾವುದು pending ಇದೆಯೋ, ಅವುಗಳನ್ನು ಮತ್ತು ಗಮನ ಸೆಳೆಯುವ ಸೂಚನೆಗಳನ್ನೆಲ್ಲಾ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದರು.

[ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣ) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

ಆದ್ದರಿಂದ ನಾನು ವಿನಂತಿಸಿಕೊಳ್ಳುತ್ತಿದ್ದೇನೆ, ಅದು ರೂಲ್ 69ನಲ್ಲಿದೆ. ಮಾನ್ಯ ಅಧ್ಯಕ್ಷರು finance bill ಪಾಸ್ ಆಗುವುದಕ್ಕೋಸ್ಕರ ಅದನ್ನು ತಡೆಹಿಡಿದಿದ್ದಾರೆ. ಅದು ಖಂಡಿತವಾಗಿ ಈ ಬಿಲ್ ಪಾಸ್ ಆದಮೇಲೆ ಬರುತ್ತದೆ. ಆಗ ನಡೆಯುವ ಚರ್ಚೆಗೆ ತಾವು ಉತ್ತರ ಕೊಡಬಹುದು.

ಶ್ರೀ ಎಂ.ಪಿ.ಪ್ರಕಾಶ್: ಆದರೆ ಮಾನ್ಯ ಉಪಾಧ್ಯಕ್ಷರೆ, ವಿತ್ತೀಯ ಕಲಾಪದಲ್ಲಿ ಮಾನ್ಯ ನಾರಾಯಣಸ್ವಾಮಿಗಳು ಮಾತನಾಡಿದ್ದಾರೆ. ಬೇರೆ ಬೇರೆ ಸದಸ್ಯರಾದ ಮಾನ್ಯ ಜೀವಿಜಯರವರು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮೊದಲಾದವರು ಮಾತನಾಡಿದ್ದಾರೆ. ಅದಕ್ಕೆ ನಾನು ಉತ್ತರ ಕೊಡಬೇಕಾಗುತ್ತದೆ. ಅವರು ಪ್ರಸ್ತಾಪಿಸಿರುವುದು ಇದಕ್ಕೆ relevant ಆಗಿರತಕ್ಕಂಥದ್ದು ಇದೆ. Inter linked problems ಇವಾಗಿವೆ. ಮಾನ್ಯ ನಾರಾಯಣಸ್ವಾಮಿಯವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರಗಳನ್ನು ತಮಗೆ ಹೇಳುವುದಾದರೆ, "ಇಲ್ಲಿ ಸಿ.ಎಂ.ಸಿ.ಗಳು ಹಣ ಕಟ್ಟಿಸಿಕೊಂಡು ಪರ್ಮಿಷನ್ ಕೊಟ್ಟಿದ್ದಾರೆ. ಭೂ ಪರಿವರ್ತನೆ ಆಗುವುದಕ್ಕೆ 12 ಇಲಾಖೆಗಳಿಗೆ ಹೋಗಬೇಕಾಗಿದೆ, 4–5 ವರ್ಷಗಳಿಂದ BMRDA ನಲ್ಲಿ blue print ಅವರ ಹತ್ತಿರ ಇರುವುದೇ ಇಲ್ಲ" ಎಂದೆಲ್ಲಾ ಅವರು ಹೇಳಿದ್ದಾರೆ. ಇದಕ್ಕೆಲ್ಲಾ ನಾನು ಉತ್ತರ ಕೊಡಬೇಕಲ್ಲವೇ? ವಿತ್ತೀಯ ಕಲಾಪದಲ್ಲಿ ಭಾಗವಹಿಸಿ ಅವರು ಈ ಮಾತುಗಳನ್ನು ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ವಿತ್ತೀಯ ಕಲಾಪದಲ್ಲಿ ಚರ್ಚೆಯಾಗಿರತಕ್ಕಂಥ ವಿಚಾರಕ್ಕೆ ತಾವು ಉತ್ತರ ಕೊಡಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: ಅವರು ಪ್ರಸ್ತಾಪಿಸಿರುವುದು ಇದಕ್ಕೆ ಸಂಬಂಧಪಟ್ಟಿರತಕ್ಕಂಥದ್ದೇ ಆಗಿದೆ. "ಅಕ್ರಮ ಖಾತೆ ಮಾಡಿರುವ ಬಗ್ಗೆ 28 ಕೇಸ್‌ಗಳಿವೆ. 94 (ಸಿ)ನಲ್ಲಿ 50 ರೂಪಾಯಿ ಕಟ್ಟಿ ಅರ್ಜಿ ಕೊಟ್ಟಿದ್ದಾರೆ. ಗ್ರಾಮಠಾಣಗಳು ಪರ್ಮಿಷನ್ ಕೊಡಬೇಕಾಗುತ್ತದೆ. ಒಬ್ಬರು 20–30 ಸರ್ವೆ ನಂಬರ್‌ಗಳನ್ನು ತೆಗೆದುಕೊಳ್ಳಬೇಕಾಗಿದ್ದರೆ ದರ ಕಡಿಮೆ ಮಾಡಿ" ಈ ಎಲ್ಲಾ ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. "ಮಲ್ಲತ್ತಹಳ್ಳಿ ಗ್ರಾಮದಲ್ಲಿ 20–30 ಸರ್ವೆ ನಂಬರ್ ನಿವೇಶನದಲ್ಲಿ ಸರ್ವೆ ನಂಬರ್ 4ರಲ್ಲಿ ಮಂಜೂರಾಗಿರುವ 570 ಚದರ ಅಡಿ, 220 ಅಡಿ, 86 ಸಾವಿರ ರೂಪಾಯಿಗಳನ್ನು ಕಟ್ಟಲು ಜಿಲ್ಲಾಧಿಕಾರಿಗಳು ನೋಟೀಸ್ ಕೊಟ್ಟಿದ್ದಾರೆ. ಇದು ಬಡವರ ವಿರೋಧಿ ಕ್ರಮ" ಇದೆಲ್ಲಾ ವಿಚಾರಗಳು ಇಲ್ಲಿ ಪ್ರಸ್ತಾಪವಾಗಿದೆ. ಅವುಗಳ ಬಗ್ಗೆ ಪತ್ರಿಕೆಯಲ್ಲಿಯೂ ಸಹ ವರದಿಯಾಗಿದೆ. ಇದು inter linked ಆಗಿರತಕ್ಕಂಥದ್ದು. ಆದ್ದರಿಂದ, ಇದು ಅನಾವಶ್ಯಕವಾದಂತಹ ಗೊಂದಲ. ನಿಯಮ 69ರ ಅಡಿಯಲ್ಲಿ ಇದು ಚರ್ಚೆಗೆ ಬಂದಾಗ, ಅದಕ್ಕೆ ನಾವು ಉತ್ತರ ಕೊಡಬಾರದು ಎಂದೇನೂ ನಮಗಿಲ್ಲ. ಆ ಸಂದರ್ಭ ಬಂದಾಗಲೂ ಸಹ ನಾನು ಉತ್ತರ ಕೊಡುತ್ತೇನೆ. ಈಗ ತಾವು ಹೇಳಿದಂತೆ, ಸೂಕ್ಷ್ಮವಾಗಿ ಬೇಕಾದರೆ ನಾನು ಉತ್ತರವನ್ನು ಕೊಡುತ್ತೇನೆ. ಏಕೆಂದರೆ, inter linked ಆಗಿರತಕ್ಕಂಥದ್ದು. ನಿಯಮ 69ರ ಅಡಿಯಲ್ಲಿ ಚರ್ಚೆಗೆ ಬಂದಾಗ ವಿವರವಾಗಿರತಕ್ಕಂಥ ಉತ್ತರವನ್ನು

ಕೊಡಲಿಕ್ಕೆ ನಾನು ತಯಾರಿದ್ದೇನೆ. ಆದುದರಿಂದ ಸನ್ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿರತಕ್ಕಂಥ ಅಂಕಿ ಅಂಶಗಳು ಏನಿವೆ, ಇವುಗಳು ನಿಜವಾಗಿಯೂ ಅದಕ್ಕಿಂತಲೂ ಹೆಚ್ಚು ಆಗಿರತಕ್ಕಂಥದ್ದು ಇದೆ. ಮಾನ್ಯ ದೇವೇಗೌಡರು ಪ್ರಸ್ತಾಪ ಮಾಡಿದ Form No. 50 ಮತ್ತು 53 ರಲ್ಲಿ ಇರತಕ್ಕಂಥದ್ದರಲ್ಲಿ, 12,223 ಎಕರೆ ಅನಧಿಕೃತವಾಗಿ ಉಪಯೋಗಿಸಲ್ಪಟ್ಟಿದೆ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ. ಆದರೆ ಅದಕ್ಕಿಂತಲೂ ಹೆಚ್ಚು ಸುಮಾರು ಶೇಕಡ 12–15 ಪ್ರಕರಣಗಳು ಮಾತ್ರ ಸಕ್ರಮಗೊಂಡು, ಉಳಿದಿರತಕ್ಕಂಥ 85–88 ಪ್ರಕರಣಗಳು ತಿರಸ್ಕರಿಸಲ್ಪಟ್ಟಿವೆ. ಎಂ.ಎಲ್.ಎ.ಗಳೇ ಅಧ್ಯಕ್ಷರು ಆಗಿರತಕ್ಕಂಥ, ಅಕ್ರಮ-ಸಕ್ರಮಕ್ಕೆ ಸಂಬಂಧಪಟ್ಟಂತಹ, ಬೆಂಗಳೂರು(ಗ್ರಾಮಾಂತರ) ಮತ್ತು ಬೆಂಗಳೂರು ಜಿಲ್ಲೆಯಲ್ಲಿ ಇರತಕ್ಕಂಥ ಎಂ.ಎಲ್.ಎ.ಗಳ ಅಧ್ಯಕ್ಷತೆಯಲ್ಲಿ ಈ Form No. 50 ಮತ್ತು 53ರಲ್ಲಿ ತಿರಸ್ಕರಿಸಲ್ಪಟ್ಟಿರತಕ್ಕಂಥ ಅರ್ಜಿಗಳನ್ನೆಲ್ಲಾ ತೆಗೆದುಕೊಂಡರೆ, ಸುಮಾರು 47 ಸಾವಿರ ಪ್ರಕರಣಗಳಲ್ಲಿ 40 ಸಾವಿರ ಪ್ರಕರಣಗಳು ತಿರಸ್ಕಾರಗೊಂಡಿವೆ. ಅದೇ ರೀತಿಯಾಗಿ, 40 ಸಾವಿರ ಪ್ರಕರಣಗಳೊಟ್ಟಿಗೆ 33,305 ಪ್ರಕರಣಗಳು, ಅಂದರೆ Form No. 50 ರಲ್ಲಿ ಕೊಟ್ಟಿರತಕ್ಕಂಥದ್ದು, ಇವೆರಡನ್ನೂ ಸೇರಿಸಿದರೆ, 73 ಸಾವಿರದಷ್ಟು ಪ್ರಕರಣಗಳು ಈ ಜಮೀನಿನ ಕಬಳಿಕೆಗೆ ಸಂಬಂಧಪಟ್ಟಂಥವು ಇರುತ್ತದೆ. Form No.50 ಮತ್ತು 53ರಲ್ಲಿಯದ್ದನ್ನು ತಿರಸ್ಕಾರ ಮಾಡಿದ ಮೇಲೆ, ಇದೇ ಎಂ.ಎಲ್.ಎ.ಗಳ ಅಧ್ಯಕ್ಷತೆಯಲ್ಲಿ ಇರತಕ್ಕಂಥ ಸಕ್ರಮೀಕರಣಗೊಳಿಸತಕ್ಕಂಥ ಸಮಿತಿ ಈ ಪ್ರಕರಣಗಳಲ್ಲಿ 73 ಸಾವಿರ ಪ್ರಕರಣಗಳನ್ನು ಅವರು ತಿರಸ್ಕಾರ ಮಾಡಿದ್ದಾರೆ ಎಂದರೆ, ಹಿಂದಿನ ಮಾನ್ಯ ಪ್ರಧಾನ ಮಂತ್ರಿಗಳು ಮಾಡಿದಂತಹ ಆಪಾದನೆಗಳಿಗೆ ಹೆಚ್ಚಾಗಿರತಕ್ಕಂಥದ್ದನ್ನು ನಾವು ಇವತ್ತೇ ಹೇಳುತ್ತಿದ್ದೇವೆ ಎನ್ನತಕ್ಕಂಥದ್ದು ಅಲ್ಲ. ಶ್ರೀಮಾನ್ ನೆಹರೂ ಓಲೇಕಾರ್ ಎನ್ನುವವರು ದಿನಾಂಕ: 4,7.05 ರಂದು ಕೇಳಿದಂತಹ ಪ್ರಶ್ನೆ ಸಂಖ್ಯೆ: 4729ಕ್ಕೆ ನಾವು ಇದೇ ಸದನದಲ್ಲಿ ಉತ್ತರ ಕೊಟ್ಟಿದ್ದೇವೆ. ಅದರಲ್ಲಿ 27,100 ಪ್ರಕರಣಗಳು ಇನ್ನೂ ಹೆಚ್ಚಿಗೆ ಆಗಿರುವುದು ಕಂಡುಬಂದಿದೆ ಎಂದು ನಾವು ವಿವರಗಳನ್ನು ಕೊಟ್ಟಿದ್ದೇವೆ. ಫಾರಂ ನಂಬರ್ 94 ಎ ಬಿ ಸಿ ವಿವರಗಳನ್ನು ಹಿಡಿದುಕೊಂಡಿರೆ, ತಾವು ಆಪಾದನೆ ಮಾಡಿರತಕ್ಕಂಥದ್ದು, ಸದನದಲ್ಲಿ ಹೇಳಿರುವುದು ಏನಿದೆ, ಅದಕ್ಕಿಂತ ಹೆಚ್ಚಿನ ಪ್ರಕರಣಗಳು ಇವೆ. ನಾನು ವಿವರಗಳನ್ನು ಈಗ ಏಕೆ ಹೇಳುವುದಕ್ಕೆ ಹೋಗುವುದಿಲ್ಲ ಎಂದರೆ, ಎಲ್ಲರೂ ಇರಬೇಕೆಂಬ ಕಾರಣಕ್ಕಾಗಿ, ಬಿಡಿಎದವರು ಕೆರೆ ಅಂಗಳಗಳನ್ನು ನುಂಗಿ ಹಾಕಿದ್ದಾರೆಂದು ಮಾನ್ಯ ಅಶೋಕ್‌ರವರು ಮಧ್ಯ ಪ್ರವೇಶ ಮಾಡಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಹೇಳಬೇಕೆಂದರೆ, 108 ಅನಧಿಕೃತವಾದ ಬಿಡಿಎ ಲೇಔಟ್‌ಗಳು ಇವೆ. ಅದರಲ್ಲಿ ಮೊನ್ನೆ ಕೂಡ ಮಾನ್ಯ ಜ್ಞಾನೇಂದ್ರರವರು ಪ್ರಶ್ನೆ ಮಾಡಿ ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದವರು ಮಾಡಿರುವಂತಹ ಅನಧಿಕೃತ ಲೇಔಟ್ ಬಗ್ಗೆ ಪ್ರಸ್ತಾಪ ಮಾಡಿದರು. ಸದಸ್ಯರ ಮೂಲಕ ಕಟ್ಟಿಸಿಕೊಂಡಿರುವ ಹಣವನ್ನೂ ಕೂಡ ವಾಪಸ್ ಕೊಡದೆ ಇರುವುದು ಅವರೇ ಮೋಸ ಮಾಡಿರುವ ಪ್ರಕರಣಗಳ ಬಗ್ಗೆ ವ್ಯಾಪಕವಾದ ಒಂದು ಚರ್ಚೆ ಕೂಡ ಆ ಸಂದರ್ಭದಲ್ಲಿ ಆಯಿತು. ಹಾಗೆಯೇ ಖಾಸಗಿ ಜಮೀನುಗಳನ್ನು ಪರಿವರ್ತನೆ ಮಾಡಬೇಕೆಂದು ಇದೆ, ಬೆಂಗಳೂರು ನಗರ ಜಿಲ್ಲೆ ಒಂದರಲ್ಲಿ ಒಂದು ಲಕ್ಷದ 63,150 ಎಕರೆ ಖಾಸಗಿ ಹಿಡುವಳಿ ಜಮೀನು ಇದೆ. ಕಳೆದ 3 ವರ್ಷಗಳಲ್ಲಿ 12,000 ಎಕರೆ ಈಗಾಗಲೇ ಭೂ ಪರಿವರ್ತನೆಗೊಂಡಿದೆ. 1,63,150 ಎಕರೆ ಖಾಸಗಿ ಹಿಡುವಳಿ ಜಮೀನು ಇದೆ. ಅದರಲ್ಲಿ ಕಳೆದ ಮೂರು ವರ್ಷಗಳಲ್ಲಿ 12,000 ಎಕರೆ ಜಮೀನು ಈಗಾಗಲೇ ಭೂ ಪರಿವರ್ತನೆಗೊಂಡಿದೆ. ಈ ಪೈಕಿ ಸುಮಾರು 7,000 ಎಕರೆ ಕಳೆದ ಒಂದು

ವರ್ಷದಲ್ಲಿ ಪರಿವರ್ತನೆ ಆಗಿದೆ. ಜಮೀನು ಭೂ ಕಾಯಿದೆಯಂತೆ ಈಗಾಗಲೇ ಇತರ ಉದ್ದೇಶಗಳಿಗೆ ಭೂ ಪರಿವರ್ತನೆ ಆಗಿ ಹೋಗಿದೆ. ಇದನ್ನು ಶ್ರೀಮಾನ್ ಎಂ.ಟಿ. ಕೃಷ್ಣಪ್ಪನವರು ಕೇಳಿದ ಪ್ರಶ್ನೆ ಸಂಖ್ಯೆ 5,074ಕ್ಕೆ ದಿನಾಂಕ 11.7.05 ರಂದು ವಿಧಾನ ಸಭೆಯಲ್ಲಿ ಉತ್ತರ ಕೊಟ್ಟಿದ್ದೇವೆ. ಆದುದರಿಂದ ಹಿಂದಿನ ಮಾನ್ಯ ಪ್ರಧಾನ ಮಂತ್ರಿಗಳು ಕೊಟ್ಟಿರತಕ್ಕಂತಹ ಆಪಾದನೆಗಳನ್ನು ವಿನಾಕಾರಣವಾಗಿ ಟೀಕೆ ಮಾಡಿ ನೀವು ಏಕೆ ಉತ್ತರ ಕೊಡಲಿಲ್ಲವೆಂದು ಪ್ರಶ್ನೆ ಕೇಳಿದರೆ ಅವರು ನಮಗೆ ಕೊಟ್ಟಿರತಕ್ಕಂತಹ ವಿವರಗಳ ಆಧಾರದ ಮೇಲೆ ತೆಗೆದುಕೊಂಡು ನಾವು ಪರಿವೀಕ್ಷಣೆ ಮಾಡಿದರೆ ಇದಕ್ಕಿಂತಲೂ ಅಗಾಧ ಪ್ರಮಾಣದಲ್ಲಿ ಭೂ ಕಬಳಿಕೆ ಆಗಿರುವುದನ್ನು ಕಂಡಿದ್ದೇವೆ. ನೀವು ಹೇಳಿದಂತೆ ನಿಯಮ 69ರ ಅಡಿಯಲ್ಲಿ ಚರ್ಚೆಯಾಗಲಿ, ನಾನು ಪ್ರತಿಯೊಂದು ಇಲಾಖೆಯ ಚರ್ಚೆಯ ಸಂದರ್ಭದಲ್ಲಿ ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇನೆ. ಆದರೆ ಈ ಸಂದರ್ಭದಲ್ಲಿ ಇಷ್ಟೇ, ಭೂ ಕಬಳಿಕೆ ಎನ್ನುವುದು ವ್ಯಾಪಕವಾದ ರೀತಿಯಲ್ಲಿ ಪ್ರಸ್ತಾಪಿಸಲ್ಪಟ್ಟಿರತಕ್ಕಂಥದ್ದು ಮತ್ತು ಕಬಳಿಕೆ ಆಗಿರುವುದು ಕಂಡಿದ್ದೇವೆ. ಕೃಷಿ ಭೂಮಿಯ ಕ್ರಯ ವಿಕ್ರಯದ ಮೇಲೆ ಯಾವ ನೋಂದಣಿಯನ್ನು ನಾವು ರದ್ದು ಮಾಡಲಿಲ್ಲ. ಕೃಷಿಯೇತರ ಜಮೀನಿಗೆ ಸಂಬಂಧಪಟ್ಟಂತೆ ಕೆಲವು ನಿರ್ಬಂಧಗಳನ್ನು ನಾವು ಮಾಡಿದ್ದೇವೆ. ಪರಿವರ್ತನೆ ಮಾಡುವುದು ನಿಲ್ಲಿಸಿ ಬಿಟ್ಟಿದ್ದೇವೆ. ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ, ಈ ಪರಿವರ್ತನೆ ಮಾಡುವುದು ಬೆಂಗಳೂರು ನಗರ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಿದ್ದೇವೆ. ಹೈಕೋರ್ಟಿನಲ್ಲಿ ಈ ಒಂದು ಅರ್ಕಾವತಿ ಲೇಔಟ್ ವಿಚಾರದಲ್ಲಿ ಬಂದಿರತಕ್ಕಂತಹ ತೀರ್ಮಾನದ ಹಿನ್ನೆಲೆಯಲ್ಲಿ ಆಗಿರತಕ್ಕಂತಹ ಅವ್ಯವಹಾರಗಳು, ಆ ತೀರ್ಮಾನ ಬಂದ ತಕ್ಷಣ ಸುಪ್ರೀಂ ಕೋರ್ಟ್‌ಗೆ ಹೋಗುವ ಅವಧಿಯಲ್ಲಿ ಮಧ್ಯಂತರದಲ್ಲಿ ಅನೇಕರು ಬಂದು ಆ ಭೂಮಿಯನ್ನು ಕಬಳಿಸತಕ್ಕಂತಹ, ಮನೆಗಳನ್ನು ನಿರ್ಮಾಣ ಮಾಡುವ ಕೆಲಸ ಮಾಡಿದ್ದರಿಂದ ಆ ಪರಿವರ್ತನೆಗೆ ಹೈಕೋರ್ಟಿನಲ್ಲಿ ಕೊಟ್ಟಿರತಕ್ಕಂತಹ ಆದೇಶದ ಪ್ರಕಾರ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿರತಕ್ಕಂಥದ್ದು ಮಾತ್ರ ನಾವು ನಿಲ್ಲಿಸಿದ್ದೇವೆಯೇ ವಿನಃ ಇಡೀ ಕರ್ನಾಟಕದ ಯಾವ ಜಿಲ್ಲೆಗಳಲ್ಲಿ ಕೂಡ ಭೂ ಪರಿವರ್ತನೆ ಆದೇಶವನ್ನು ಇನ್ನು ನಿಲ್ಲಿಸಿಲ್ಲ. 12 ಇಲಾಖೆಗಳಿಗೆ ನೀವು ಹೋಗಬೇಕಾಗಿದೆ ಎಂಬ ವಿಚಾರ ಪ್ರಸ್ತಾಪ ಮಾಡಿದಿರಿ, 12 ಇಲಾಖೆಗಳಿಗೆ ಇವರು ಹೋಗಬೇಕಾಗಿರುವುದು ಇಲ್ಲ. ಇವರು ಹೋಗಬೇಕಾದುದು ನಮ್ಮ ಕಂದಾಯ ಇಲಾಖೆಗೆ ಮತ್ತು ಟೌನ್ ಪ್ಲ್ಯಾನಿಂಗ್ ಇಲಾಖೆಗೆ. ಈ ಎರಡು ಇಲಾಖೆಗಳಿಗೆ ಮಾತ್ರ ಹೋಗತಕ್ಕಂಥದ್ದು ಇದೆ. ಉಳಿದಿರತಕ್ಕಂತಹ ಇಲಾಖೆಯಲ್ಲಿ ಏಕ ಗವಾಕ್ಷಿ ಪದ್ಧತಿಯ ಮೇಲೆ ಅದರ ವಿವರಗಳನ್ನು ತೆಗೆದುಕೊಂಡು ಬರುವುದು ಅವರಿಗೆ ಸಂಬಂಧಪಟ್ಟ ವಿಚಾರಗಳು ಆಗಿರುತ್ತವೆ. 94 'ಸಿ' ಕೆಳಗೆ 42,968 ಅರ್ಜಿಗಳು ಬಂದಿದ್ದರೆ ಅದರಲ್ಲಿ 3750 ಅರ್ಜಿಗಳನ್ನು ಮಾತ್ರ ತಿರಸ್ಕರಿಸಿ ಉಳಿದ ಪ್ರಕರಣಗಳು ಇನ್ನು ಬಾಕಿ ಇರುವ ಸಂದರ್ಭದಲ್ಲಿ, ಅದೇ ಪ್ರಮಾಣದಲ್ಲಿ ಯೋಜನೆ ಮಾಡಿದರೆ ಯಾರ್‍ಯಾರು ಯಾವ ಯಾವ ಭೂಮಿಯನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದ್ದಾರೆಂದು ಬರುತ್ತದೆ. ಮಾನ್ಯ ಜೇವಿಜಯಾರವರು ಭೂಮಿಯ ವಿಚಾರದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಅದರಲ್ಲಿ ಹಿಂದಿನ ರಾಜರ ಕಾಲದಲ್ಲಿ ಈ ಜುಮ್ಮಾ ಕೊಡುವುದು ಇತ್ತು, ಜಾಗಿರುಬಾನೆ ಕೊಡುವುದು ಇತ್ತು. ಮುದ್ದುರಾಜರು ಅಲ್ಲಿ ಇದ್ದ ಸಂದರ್ಭದಲ್ಲಿ 1897ರಲ್ಲಿ ಇಂಗ್ಲೆಂಡ್ ಅರಸರು ಸರ್ವೇ ಮಾಡಿಸಿ, ಸರ್ವೇ ನಂಬರ್ ಕೂಡ ಕೊಟ್ಟಿದ್ದಾರೆ. 64ರ ಕಾಯಿದೆಯನ್ನು ಕೊಡಗಿಗೆ ಅನ್ವಯ ಮಾಡುವುದಕ್ಕೆ ಏಕೆ ನೀವು ತಯಾರಿಲ್ಲ ಎಂದು ಅವರ ಚರ್ಚೆಯಲ್ಲಿ ಹೇಳಿದರೆ. ಇದು ನಿಜವಾಗಿ ಅವರು ಒಳ್ಳೆಯ

ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಭೂಮಿ ಹೇಗೆ ಸರ್ವೇ ಮಾಡಿದ್ದರ ಮೇಲೆ ಹಕ್ಕು ಸ್ಥಾಪಿಸಿಲ್ಪಟ್ಟಿದೆಯೋ ಹಾಗೆ ಕೊಡಗು ಕೂಡ ಒಂದು ವಿಶಿಷ್ಟ ಜಿಲ್ಲೆ. ಅದು ತನ್ನದೇ ಆದ ಐತಿಹಾಸಿಕ ಕಾರಣಗಳಿಗೆ ರಾಜ ಮಹಾರಾಜರುಗಳ ಕಾಲದಲ್ಲಿ, ನಂತರ ಈಸ್ಟ್ ಇಂಡಿಯಾ ಕಂಪನಿಯವರು ತಾವೇ ನೇರವಾಗಿ ಅಧಿಪತ್ಯವನ್ನು ನಡೆಸಿದ ಕಾರಣಕ್ಕಾಗಿ ಅಲ್ಲಿ ಇರತಕ್ಕಂತಹ ಒಂದು ವಿಶಿಷ್ಟವಾದಂಥ ವಿಚಾರಗಳನ್ನು ನಾವು ತೆಗೆದುಕೊಂಡು ಜಾಗಿರುಬಾಸೆ ಮೊದಲಾಗಿರುವುದು ನಾವು 202ರ ರಿಪೀಲ್ ಮತ್ತು ಸೇವಿಂಗ್ಸ್ ಕೆಳಗೆ ಅದನ್ನು ಮತ್ತೆ ಅನುಕೂಲ ಮಾಡಿಕೊಡಬೇಕು. ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಕಲಂ 75ರಲ್ಲಿ ಮರಗಳ ಮೇಲಿನ ಹಕ್ಕನ್ನು ಸ್ಥಾಪಿಸುವ ವಿಚಾರದಲ್ಲಿ ಕೂಡ ಮಾನ್ಯ ಮುಖ್ಯಮಂತ್ರಿಗಳು ಎರಡು ಸಭೆಗಳನ್ನು ನಡೆಸಿದ್ದಾರೆ. ಅನೇಕ ಜನ ಪ್ರತಿನಿಧಿಗಳು ಕೊಡಗಿನಿಂದ ಬಂದು ಅದರಲ್ಲಿ ಭಾಗವಹಿಸಿದ್ದಾರೆ. ನಾವೆಲ್ಲರೂ ಭಾಗವಹಿಸಿದ್ದೇವೆ. ಕಂದಾಯ ಇಲಾಖೆಯ ಕಾರ್ಯದರ್ಶಿಗಳು ಅಲ್ಲಿ ಇದ್ದು ಆ ಎಲ್ಲಾ ವಿಚಾರಗಳನ್ನು ನಾವು ಸಚಿವರ ಸಂಪುಟದ ಸಭೆಯಲ್ಲಿ ತಂದು ಅದನ್ನು ತೀರ್ಮಾನ ಮಾಡತಕ್ಕಂಥದ್ದು, ಬರುವ ವಾರದಲ್ಲಿ ಪ್ರಾಯಶಃ ಸಚಿವ ಸಂಪುಟದ ಸಭೆಯಲ್ಲಿ ಇದು ತೀರ್ಮಾನವಾಗುತ್ತದೆ. ತಾವು ಪ್ರಸ್ತಾಪ ಮಾಡಿದಂತೆ ನಮ್ಮ ಭೂ ಕಂದಾಯ ಕಾನೂನು ಏನಿದೆ, ಇದನ್ನು ಇಡೀ ಕರ್ನಾಟಕಕ್ಕೆ ಅನ್ವಯ ಮಾಡಬೇಕು. ಕೊಡಗಿಗೆ ಅನ್ವಯ ಮಾಡುವುದೂ ಕೂಡ ಇದೆ. ಕೊಡಗಿನಲ್ಲಿ ಇರತಕ್ಕಂತಹ ಜನ ಪ್ರತ್ಯೇಕವಾದ ಕೂಗನ್ನು ಮಾಡುತ್ತಿದ್ದಾರೆ. ನೀವು ಈ ರೀತಿ ಅಲಕ್ಷ್ಯ ಮಾಡಿದರೆ ಅಪಾಯ ಸನ್ನಿಹಿತವಾಗುತ್ತದೆ ಎಂದು ಜೀವಿಜಯಾರವರು ಪ್ರಸ್ತಾಪ ಮಾಡಿದ ಗಂಭೀರತೆಯನ್ನು ಪರಿಶೀಲಿಸಿ ನಾವು ಪ್ರಥಮ ಬಾರಿಗೆ ಈ ರೀತಿಯಾಗಿ ಕಾನೂನಿನ ಬಗ್ಗೆ ಸಚಿವ ಸಂಪುಟದ ಸಭೆಯ ಒಪ್ಪಿಗೆ ಪಡೆಯಬೇಕೆಂದು ಹೇಳಿ ಸಮಗ್ರವಾದ ಬದಲಾವಣೆಗಳನ್ನು ತರುವುದಕ್ಕಾಗಿ ನಾವು ಸಚಿವ ಸಂಪುಟದ ಸಭೆಯಲ್ಲಿ ಮುಂದಿನ ವಾರದ ಒಳಗಾಗಿ ಮಂಡಿಸಿ ಅದನ್ನೂ ಕೂಡ ಸದನ ಮುಕ್ತಾಯ ಆಗುವುದರೊಳಗಾಗಿ ಸಾಧ್ಯವಾದರೆ ಹೇಳುತ್ತೇವೆ. ಇಲ್ಲದಿದ್ದರೆ ಅದನ್ನು ನಾವು ಖಂಡಿತವಾಗಿ ಮಾನ್ಯ ಜೀವಿಜಯಾರವರಿಗೆ ಸರ್ಕಾರಿ ಆಜ್ಞೆ ಬಂದಿರುವುದನ್ನು ಸಹ ಕಳುಹಿಸಿ ಕೊಡುತ್ತೇನೆ. ಹೀಗೆ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿರತಕ್ಕಂಥದ್ದು ಏನು ಇದೆ, ಬೆಂಗಳೂರಿನ 18 ಕಿ.ಮೀ. ಒಳಗೆ ಸುತ್ತಮುತ್ತಲು ಇರುವ ಭೂ ಮಂಜೂರಾತಿಗೆ ಕೆಲವು ಷರತ್ತುಗಳು ಇವೆ. ಅಂದರೆ ಚಾರಿಟಬಲ್ ಟ್ರಸ್ಟ್ ಆಗಿರುವುದು ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಪಟ್ಟ ಭೂಮಿ ವಿಚಾರಕ್ಕೆ ಸಂಬಂಧಪಟ್ಟಿದ್ದು ಕೊಡಬೇಕಾದ ಕೆಲಸ ಇದೆ. ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಕುಡಿಯುವ ನೀರಿಗೆ ಸಂಬಂಧಪಟ್ಟ ಹಾಗೆ ಈ ಭೂ ಕಂದಾಯ ಇಲಾಖೆ ಏನಿದೆ ಅದು ತನ್ನ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ. ಹಿಂದೆ ಇದ್ದಂತಹ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕಳೆದ ಎರಡು–ಮೂರು ವರ್ಷಗಳಲ್ಲಿ ಅವರು ಸಚಿವ ಸಂಪುಟ ಸಭೆಯ ಅಧ್ಯಕ್ಷರಾಗಿ ಹಿಂದಿನ ಕಂದಾಯ ಸಚಿವರಾದ ಮಾನ್ಯ ಶ್ರೀಕಂಠಯ್ಯನವರು ಇದ್ದಂತಹ ಸಂದರ್ಭದಲ್ಲಿ ಕೂಡ 3–4 ವರ್ಷಗಳಿಂದ ಸತತವಾಗಿ ಬರಗಾಲ ಬಂದಿತ್ತು, ಅದು ತಮಗೆ ಗೊತ್ತಿದೆ. ಕಳೆದ ವರ್ಷವೂ ಬರಗಾಲದ ಛಾಯೆ ಇದ್ದ ಕಾರಣ ಇದ್ದುದ್ದರಿಂದ ನಾನು ಕೇವಲ ಕಳೆದ ವರ್ಷಕ್ಕೆ ಸೀಮಿತಗೊಳಿಸುವುದಾದರೆ 37 ನಗರಗಳಿಗೆ ಹಾಗೂ 284 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನಾವು ನೀರನ್ನು ಒದಗಿಸಿಕೊಟ್ಟಿದ್ದೇವೆ. ಈ ಕುಡಿಯುವ ನೀರಿನ ಸಂಬಂಧವಾಗಿ 73 ಕೋಟಿ ರೂಪಾಯಿಗಳನ್ನು ಆ ಸಂದರ್ಭದಲ್ಲಿ ಬಿಡುಗಡೆ ಮಾಡಿರುವುದು ಕೂಡ ತಮಗೆ ಗೊತ್ತಿದೆ. ಅಂದರೆ ಪ್ರವಾಹ ನಿಧಿಗೆ ನಾವು 1,564 ಕೋಟಿ ರೂಪಾಯಿಗಳನ್ನು ಮತ್ತು

ಸುಮಾರು 549 ಲಕ್ಷ ಮೆಟ್ರಿಕ್ ಟನ್‌ನಷ್ಟು ಆಹಾರಧಾನ್ಯ ಕೊಡಬೇಕೆಂದು ಕೇಳಿದರೆ ಕೇಂದ್ರ ಸರ್ಕಾರದಿಂದ ನಮಗೆ ಏನೂ ಸಹಾಯ ಬರಲಿಲ್ಲ. ಆದರೂ ಕೂಡ ರಾಜ್ಯ ಸರ್ಕಾರವೇ ತಮ್ಮ ರಾಜಸ್ವದ ನಿಧಿಯ ಮೂಲಕ ಸುಮಾರು 1,138 ಲಕ್ಷ ರೂಪಾಯಿಗಳನ್ನು ಪ್ರವಾಹ ಪರಿಹಾರಕ್ಕೆ ಕೊಟ್ಟಿರತಕ್ಕಂಥದ್ದೂ ಕೂಡ ಇದೆ. 1898 ಲಕ್ಷ ರೂಪಾಯಿಗಳನ್ನು ನಾವು ಏನು ಕೇಳಿದ್ದೇವೆ, ಅದಕ್ಕೆ ಹಣ ಬಿಡುಗಡೆ ಮಾಡಲಿಲ್ಲ. ಆ ಕಾರಣಕ್ಕಾಗಿ ರಾಜ್ಯ ಸರ್ಕಾರ ತನ್ನ ಸಂಪನ್ಮೂಲದ ಇತಿಮಿತಿಯಲ್ಲಿ ಪ್ರವಾಹ ಪೀಡಿತವಾಗಿರತಕ್ಕಂಥಹ ಪ್ರದೇಶಗಳಲ್ಲಿ ಮನೆ ಬಿದ್ದದ್ದು ಇರಬಹುದು, ರಸ್ತೆಗಳ ದುರಸ್ತಿ ಆಗಿರಬಹುದು, ಅದಕ್ಕೆ ಕಳೆದ ಸಾರಿ ಕೊಟ್ಟಿದ್ದೇವೆ. ಅಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಬಹಳ ತೊಂದರೆ ಅನುಭವಿಸಿದ್ದಾರೆ ಎನ್ನುವ ಕಾರಣಕ್ಕಾಗಿ ಸುಮಾರು 67 ಕೋಟಿ ರೂಪಾಯಿಗಳನ್ನು ಶೇಕಡ 50 ಪರ್ಸೆಂಟ್ ರಿಯಾಯಿತಿಯಲ್ಲಿ ಬೀಜವನ್ನು ಕೊಡಲು ಕೃಷಿ ಇಲಾಖೆಗೆ ನಾವು ಹಣವನ್ನು ಕೊಟ್ಟಿದ್ದೇವೆ. ಕಳೆದ ಬಾರಿ ಸಣ್ಣ ಮತ್ತು ಅತಿ ಸಣ್ಣ ರೈತರು ಎಲ್ಲರಿಗೂ ಕೂಡ ಶೇಕಡ 50 ರಷ್ಟು ರಿಯಾಯಿತಿ ದರದಲ್ಲಿ ಬೀಜ ಕೊಟ್ಟಿರುವುದು, ಯಾವುದೇ ತರಹದ ಆಪಾದನೆಗಳಾಗಲಿ, ಯಾವುದೇ ತರಹದ ದೂರುಗಳಾಗಲಿ, ನಿರ್ವಹಣೆಯಲ್ಲಿ ಅಸಮರ್ಥತೆಯನ್ನು ತೋರಿಸಿದರು ಎಂಬುದಕ್ಕೆ ಒಳಗಾಗದಂತಹ ರೀತಿಯಲ್ಲಿ ನಮ್ಮ ಸರ್ಕಾರ ಕಳೆದ ವರ್ಷದ ಬರಗಾಲದ ಪರಿಸ್ಥಿತಿಯನ್ನು ನಿರ್ವಹಿಸಿದೆ. ಕಳೆದ ವರ್ಷ ಅಲ್ಲಿಷ್ಟು ಇಲ್ಲಿಷ್ಟು ಮಳೆ ಬಂದಿರತಕ್ಕಂಥದ್ದು ಇದ್ದರೂ ಕೂಡ ಅಲ್ಲಿ ನಮ್ಮ ವರ್ಗೀಕರಣದ ರೀತಿಯಲ್ಲಿ ಕುಡಿಯುವ ನೀರಿನ ಅಭಾವ ಅಂತರ್ಜಲದ ಅಭಾವ ಎನ್ನತಕ್ಕಂಥದ್ದು ಜಾಸ್ತಿ ಇರುವುದರಿಂದ ಇದು ಅಗ್ರಿಕಲ್ಚರ್ ಡ್ರೌಟ್ ಮತ್ತು ಡ್ರಿಂಕಿಂಗ್ ವಾಟರ್ ಡ್ರೌಟ್ ಎಂದು ಹೇಳಿ ಅದನ್ನು ನಾವು ವಿಂಗಡಣೆ ಮಾಡಿ ಕುಡಿಯುವ ನೀರಿನ ಸಮಸ್ಯೆಗಾಗಿ ಕೋಲಾರಕ್ಕೆ ಕಳೆದ ವರ್ಷದಲ್ಲಿಯೇ 12 ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕಂಥದ್ದೂ ಕೂಡ ಇದೆ. ಅಂದರೆ ಅಲ್ಲಿ ನಿಜವಾಗಿಯೂ ಕೂಡ ಬಹಳ ದೊಡ್ಡ ತೊಂದರೆ ಇದೆ. ಈ ವರ್ಷವೂ ಕೂಡ 3 ಕೋಟಿ 74 ಲಕ್ಷ ರೂಪಾಯಿಗಳು ಅವರ ಹತ್ತಿರ ಇತ್ತು. ಅದನ್ನು ಖರ್ಚು ಮಾಡಬೇಕೆಂದು ಆಜ್ಞೆಯನ್ನೂ ಕೂಡ ನಾವು ಕಳುಹಿಸಿ ಕೊಟ್ಟಿದ್ದೇವೆ. ಅದೇ ರೀತಿಯಾಗಿ ಸನ್ಮಾನ್ಯ ಅಧ್ಯಕ್ಷರೆ, ಅತ್ಯಂತ ಸಂತೋಷದಿಂದ ಈ ಒಂದು ವರ್ಷದಲ್ಲಿ ನಾವು ಮಾಡಿದಂಥ ಕಾರ್ಯ ನಮ್ಮ ಬೆನ್ನನ್ನು ನಾವೇ ಚಪ್ಪರಿಸಿ ಕೊಳ್ಳಬೇಕಾಗಿರತಕ್ಕಂಥದ್ದೇನಿಲ್ಲ, ಇದು ಒಂದು ಮಾತ್ರ ಇಲಾಖೆ. ಇದಕ್ಕೆ ಐತಿಹಾಸಿಕ ಕಾರಣಗಳ ಮೂಲಕವಾಗಿ ತನ್ನದೇ ಆಗಿರತಕ್ಕಂಥ ಒಂದು ಘನತೆಯನ್ನು ಈ ಇಲಾಖೆ ಪಡೆದಿದೆ. ಇದು ಹಿಂದೆ ಇದ್ದಂಥ ಪರಿಕಲ್ಪನೆಯಲ್ಲಿ ಬರೇ ಭೂ ಕಂದಾಯವನ್ನು ವಸೂಲಿ ಮಾಡತಕ್ಕಂಥದ್ದು, ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಡತಕ್ಕಂಥದ್ದಲ್ಲ. ನಮ್ಮ ಜಿಲ್ಲಾಧಿಕಾರಿ ಆ ಜಿಲ್ಲಾ ಮಟ್ಟದಲ್ಲಿ ಒಬ್ಬ ಮುಖ್ಯಸ್ಥನಾಗಿ ಸರ್ಕಾರದ ಪ್ರತಿನಿಧಿಯಾಗಿ ಅಲ್ಲಿರತಕ್ಕಂಥ ವಿಶಿಷ್ಟ ಸೇವೆಗಳನ್ನು ಮಾಡುವುದರ ಜೊತೆಗೆ ಶಿಷ್ಟಾಚಾರವನ್ನು ಪರಿಪಾಲಿಸುವುದರಿಂದ ಹಿಡಿದು ಪ್ರವಾಹ, ದುರಂತ, ಬೆಂಕಿ ಅನಾಹುತ ಅಥವಾ ಬರಗಾಲ ಈ ಎಲ್ಲಾ ಸಮಸ್ಯೆಗಳಿಗೂ ಕೂಡ ಆತ ಉತ್ತರ ಕೊಡತಕ್ಕಂಥವನಾಗುತ್ತಾನೆ. ಅದರ ಜೊತೆಗೆ ಶಾಂತಿ, ಶಿಸ್ತು ಮತ್ತು ಕಾನೂನಿನ ಪರಿಪಾಲನೆ, ಇವುಗಳ ಬಗ್ಗೆಯೂ ಕೂಡ ಆತ ಒಬ್ಬ ಜವಾಬ್ದಾರನಾಗಿರತಕ್ಕಂಥ ಒಬ್ಬ ಜಿಲ್ಲಾಧಿಕಾರಿಯಾಗಿರುತ್ತಾನೆ. ಆ ಕಾರಣಕ್ಕಾಗಿ ಅವರು ಎಲ್ಲಾ ಇಲಾಖೆಗಳಿಗೂ ಸಂಬಂಧಪಟ್ಟಂಥವರು. ಈ ಸಲ ಮಾತ್ರ ನಾವು ಬಹಳ ಮುಖ್ಯವಾಗಿರತಕ್ಕಂಥ ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಮುಖ್ಯವಾಗಿರತಕ್ಕಂಥದ್ದು ಸರ್ವೆ ಇಲಾಖೆಯವರು

ಅನೇಕ ಪೋಡಿ ಪ್ರಕರಣಗಳಿವೆ ಎಂದರು. ಸುಮಾರು 22 ಲಕ್ಷಕ್ಕಿಂತಲೂ ಹೆಚ್ಚು ಪೋಡಿ ಪ್ರಕರಣಗಳಿದ್ದವು. ಆ 22 ಲಕ್ಷಕ್ಕಿಂತಲೂ ಹೆಚ್ಚು ಪೋಡಿ ಪ್ರಕರಣಗಳನ್ನು ಬಗೆಹರಿಸುವುದಕ್ಕೆ ಬಹಳ ಕಷ್ಟವಾಗುತ್ತದೆ ಮತ್ತು ನಮ್ಮ ಸರ್ವೆಯರ್‌ಗಳನ್ನು ಬೇರೆ ಬೇರೆ ಇಲಾಖೆಗೆ ನಿಯೋಜನೆ ಮೇಲೆ ಎರವಲು ಸೇವೆಯ ಮೇಲೆ ತೆಗೆದುಕೊಂಡಿದ್ದಾರೆ. ಅದು ಸಣ್ಣ ನೀರಾವರಿ ಇಲಾಖೆಯೇ ಇರಬಹುದು, ಟೌನ್ ಪ್ಲಾನಿಂಗ್ ಅಥಾರಿಟಿಯೇ ಇರಬಹುದು, ಅಥವಾ ನಮ್ಮ ಪಟ್ಟಣಗಳ ಅಭಿವೃದ್ಧಿ ಪ್ರಾಧಿಕಾರದವರೇ ಇರಬಹುದು, ಬೇರೆ ಬೇರೆ ಇಲಾಖೆಯವರೂ ಕೂಡ ತೆಗೆದುಕೊಂಡಿರತಕ್ಕಂಥ ಕಾರಣ ಇರುವುದರಿಂದ ಪೋಡಿ ಪ್ರಕರಣಗಳಲ್ಲಿ ಆಗಿರತಕ್ಕಂಥ ದೊಡ್ಡ ತೊಂದರೆಯನ್ನು ನೋಡಿ ಮತ್ತು ಸರ್ವೆ ಇಲಾಖೆಗೆ ಒಂದು ಹೊಸ ಕಾಯಕಲ್ಪ ಕೊಡಬೇಕು ಎನ್ನುವ ದೃಷ್ಟಿಕೋನದಿಂದ ಇಡೀ ಸರ್ವೇ ಇಲಾಖೆಯನ್ನು ನಾವು ಕಂದಾಯ ಇಲಾಖೆಯೊಂದಿಗೆ ವಿಲೀನಗೊಳಿಸಿದ್ದೇವೆ. ಅದು ಮೇ ಒಂದರಿಂದ ಜಾರಿಗೆ ಬಂದಿದೆ, ಮೇ ಒಂದರಿಂದ ಜಾರಿಗೆ ಬಂದು ಕಂದಾಯ ಇಲಾಖೆಯೊಂದಿಗೆ ವಿಲೀನವಾಗಿರತಕ್ಕಂಥದ್ದು ಇದೆ. ಇದು ಅತ್ಯಂತ ಐತಿಹಾಸಿಕವಾಗಿರತಕ್ಕಂಥ ಒಂದು ನಿರ್ಣಯ. ತಾಲ್ಲೂಕು ಮಟ್ಟದಲ್ಲಿ ಅಲ್ಲಿರತಕ್ಕಂಥ ಸರ್ವೆಯರ್ ತಾಲ್ಲೂಕು ತಹಶೀಲ್ದಾರನ ಅಧೀನದಲ್ಲಿ ಕೆಲಸ ಮಾಡಬೇಕಾಗುತ್ತದೆ. ಉಪ ಆಯುಕ್ತರ ಅಧೀನದಲ್ಲಿ ಅಲ್ಲಿ ಎ.ಡಿ.ಎಲ್.ಆರ್. ಕೆಲಸ ಮಾಡಬೇಕಾಗುತ್ತದೆ. ಡಿಸ್ಟ್ರಿಕ್ಟ್ ಲ್ಯಾಂಡ್ ರೆವಿನ್ಯೂ ರೆಕಾರ್ಡ್ಸ್‌ನ ಅಧಿಕಾರಿ ಜಿಲ್ಲಾಧಿಕಾರಿಗಳ ಕೈಕೆಳಗಡೆ ಕೆಲಸ ಮಾಡಬೇಕಾಗುತ್ತದೆ. ಇಲ್ಲಿ ಡೈರೆಕ್ಟರ್ ಆಫ್ ಸರ್ವೆ ಸೆಟ್ಲ್‌ಮೆಂಟ್ ಮೊದಲಾದಂಥವರು ನಮ್ಮ ಕಾರ್ಯದರ್ಶಿಗಳ ಕೈಕೆಳಗೆ ಕೆಲಸ ಮಾಡಬೇಕಾಗಿರತಕ್ಕಂಥದ್ದು ಇದೆ. ಒಂದು ಬಹಳ ಸಂತೋಷದ ಸಂಗತಿ ಎಂದರೆ ಅಂತರರಾಜ್ಯ ಗಡಿಗಳ ಸರ್ವೆಯನ್ನೂ ಕೂಡ ನಾವು ಪ್ರಾರಂಭ ಮಾಡಿದ್ದೇವೆ. ಇದರಲ್ಲಿ ಸುಮಾರು 13, 61, 039 ಎಕರೆ ಪ್ರದೇಶವಿದ್ದು, ತಮಿಳುನಾಡು ಮತ್ತು ಕರ್ನಾಟಕದ ಗಡಿ ಪುನರ್ ವಿಮರ್ಶೆ ಈಗಾಗಲೇ ನಡೆದಿದೆ. ಈ ಸರ್ವೆಯನ್ನು ಮುಕ್ತಾಯಗೊಳಿಸಿದ್ದೇವೆ. 13,61,039 ಎಕರೆಯಷ್ಟು ಭೂಮಿಯು ತಮಿಳುನಾಡು ಮತ್ತು ನಮಗಿರತಕ್ಕಂಥ ಗಡಿಗಳ ಸಂಬಂಧದಲ್ಲಿ ಸರ್ವೆ ನಡೆದಿರತಕ್ಕಂಥದ್ದಕ್ಕೆ ಮತ್ತೆ ನಾವು ಪುನರ್‌ವಿಮರ್ಶೆ ಮಾಡತಕ್ಕಂಥದ್ದು ಅವರ ಪ್ರತಿನಿಧಿಗಳು ಮತ್ತು ನಮ್ಮ ಪ್ರತಿನಿಧಿಗಳು ಕಲೆತಿರತಕ್ಕಂಥದ್ದು ಇದೆ. ಸುಮಾರು ಅಂತರ್‌ರಾಜ್ಯ ಸರ್ವೆ ನಡೆದಿರುವುದರ ಜೊತೆಗೆ ಸಿಟಿ ಸರ್ವೆ ಎನ್ನತಕ್ಕಂಥದ್ದು ಬಹಳ ಕಡೆಗೆ ಲೋಪವಾಗಿದೆ. ಮುಂಬೈ ಕರ್ನಾಟಕದ ಜಿಲ್ಲೆಗಳಲ್ಲೇನಿದೆ ಅಲ್ಲಿ ಸಿಟಿಯಲ್ಲಿ ಸರ್ವೆ ಆಗಿರತಕ್ಕಂಥದ್ದಕ್ಕೆ ಬೇಕಾದಷ್ಟು ಒಳ್ಳೆಯ ದಾಖಲೆಗಳಿವೆ. ಆದರೆ ಇಡೀ ಸಮಗ್ರವಾಗಿರತಕ್ಕಂಥ ಕರ್ನಾಟಕದಲ್ಲಿ ದೊಡ್ಡ ದೊಡ್ಡ ಪಟ್ಟಣಗಳಿಗೆ ಸಂಬಂಧಿಸಿದಂತೆ ಇಂಥ ಒಂದು ಸಿಟಿ ಸರ್ವೆ ಮಾಡಿರತಕ್ಕಂಥದ್ದು ಇಲ್ಲ. ಅದಕ್ಕಾಗಿ ಅದಕ್ಕೆ ಸುಮಾರು 33,702 ಖಾತೆಗಳನ್ನು 48 ಪಟ್ಟಣಗಳಲ್ಲಿ ಸರ್ವೆ ಮಾಡಿಸಿ ಆ ಖಾತಾಗಳನ್ನು ಬದಲಾವಣೆಗಳನ್ನು ಕಳೆದ ಒಂದು ವರ್ಷದಲ್ಲಿ ಮಾಡಿದ್ದೇವೆ. ಇದರಲ್ಲಿ 2,64,603 ಸರ್ವೆ ದಾಖಲೆಗಳನ್ನು ನಾವು ಮೈಕ್ರೋ ಫಿಲ್ಮ್ ಮಾಡಿದ್ದೇವೆ. ಹಾಳಾಗುತ್ತಿದ್ದಂಥ ಸರ್ವೆ ಮತ್ತು (ಇ)ಗವರ್‌ನೆನ್ಸ್ ಬರತಕ್ಕಂಥ ಸಂದರ್ಭಗಳಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಸರ್ವೆ ರೆಕಾರ್ಡ್‌ಗಳನ್ನು ಇಟ್ಟುಕೊಂಡಿರತಕ್ಕಂಥದ್ದು ಹಳೆಯದಾದಂಥ ದಾಖಲೆಗಳಾಗುತ್ತವೆ. ಆದುದರಿಂದ ಅವನ್ನು ಸರಿಪಡಿಸಬೇಕು ಎನ್ನುವಂಥ ಕಾಲದಲ್ಲಿ 2,64,603 ಮೂಲ ಸರ್ವೆ ದಾಖಲೆಗಳನ್ನು ನಾವು ಈಗಾಗಲೇ ಮೈಕ್ರೋ ಫಿಲ್ಮ್ ಮಾಡಿಸಿದ್ದೇವೆ. 72 ಲಕ್ಷ, ರೂಪಾಯಿಗಳನ್ನು ಖರ್ಚು ಮಾಡಿ ಮಳವಳ್ಳಿ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ

Computerisation of the survey Records' ಮಾಡತಕ್ಕಂಥದ್ದು ಏನಿದೆ ಅದನ್ನು ಗಣಕೀಕರಣಗೊಳಿಸಿದ್ದೇವೆ. ಸರ್ವೆ ಮಾಡತಕ್ಕಂಥದ್ದರಲ್ಲಿ ಅಲ್ಲಿರುವಂಥ ಗ್ರಾಮ ನಕಾಶೆ, ತಾಲ್ಲೂಕಿನ ನಕಾಶೆ, ಹಿಡುವಳಿದಾರರ ನಕಾಶೆ, ಟಿಪ್ಪಣಿ, ಮೊದಲಾಗಿರತಕ್ಕಂಥದ್ದನ್ನೆಲ್ಲಾ ಮಾಡಿದ್ದೇವೆ. ಶೇಕಡ 90ಕಿಂತಲ್ಲೂ ಹೆಚ್ಚು ಭಾಗ ಈಗಾಗಲೇ ಮುಕ್ತಾಯವಾಗಿದೆ. ಈ ಪ್ರಾಯೋಗಿಕವಾಗಿರತಕ್ಕಂಥ ತಾಲ್ಲೂಕಿನಲ್ಲಿ ಕೈಗೊಂಡಿರತಕ್ಕಂಥ ಪ್ರಯೋಗದ ಮೂಲಕವಾಗಿ ನಾವು ಇಡೀ 175 ತಾಲ್ಲೂಕುಗಳಿಗೆ ಇವುಗಳನ್ನು ವಿಸ್ತರಿಸಬೇಕು ಎನ್ನತಕ್ಕಂಥ ವಿಚಾರವನ್ನು ಕೂಡ ಕೈಗೊಂಡಿದ್ದೇವೆ. ಸನ್ಮಾನ್ಯ ಉಪಾಧ್ಯಕ್ಷರೆ, ಹಿಂದಿನ ಸರ್ಕಾರದಲ್ಲಿ 2286 ಸರ್ವೆಯರ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿಯನ್ನು ಮಾಡಿಕೊಂಡಿದ್ದರು. ಯಾವುದಾದರೂ ವಿವಾದಗಳು ಬಂದರೆ ಆ ವಿವಾದಗಳನ್ನು ತಾಲ್ಲೂಕು ಮಟ್ಟದ ನಮ್ಮ ಖಾಯಂ ಆಗಿರತಕ್ಕಂಥ ಸರ್ಕಾರಿ ನೌಕರರಾದಂಥ ಸರ್ವೆಯರ್ ಕೈಕೆಳಗೆ ಆ ಕೆಲಸವನ್ನು ಮಾಡಬೇಕು. ಅವರು ವಿವಾದಕ್ಕೆ ಸಂಬಂಧಪಟ್ಟಿರತಕ್ಕಂಥದ್ದಕ್ಕೆ ಸರ್ವೆ ಮಾಡಿದರೆ, ಅವರಿಗೆ 300 ರೂಪಾಯಿ ಒಂದು ಪ್ರಕರಣಕ್ಕೆ ಕೊಡಬೇಕು ಎಂದು ಹೇಳಿ ಅವರಿಗೆ ಮೂರು ತಿಂಗಳವರೆಗೆ ತರಬೇತಿಯನ್ನು ಕೊಟ್ಟು ಗುತ್ತಿಗೆ ಆಧಾರದ 2286 ಮಂದಿ ಸರ್ವೆಯರ್‌ಗಳನ್ನು ನೇಮಕಾತಿ ಮಾಡಿಕೊಂಡಿದ್ದರು. ದುರ್ದೈವವಶಾತ್ ಹೈಕೋರ್ಟ್‌ನಲ್ಲಿ ಅದಕ್ಕೆ ಸ್ಟೇ ಆರ್ಡರ್ ಸಿಕ್ಕಿತು. ಸುಮಾರು ಎರಡು ವರ್ಷಗಳ ಕಾಲ ಅವರಿಗೆ ಕೆಲಸ ಇಲ್ಲದಂಥ ಪರಿಸ್ಥಿತಿ ಸೃಷ್ಟಿಯಾಗಿತ್ತು. ಈಗ ಆ ತಡೆಯಾಜ್ಞೆಯನ್ನು ತೆಗೆದು ಹಾಕಿರುವುದರಿಂದ ಆ ಸರ್ವೆಯರ್‌ಗಳೆಲ್ಲರೂ ಕೂಡ ಕೆಲಸದ ಮೇಲೆ ಹೋಗಿದ್ದಾರೆ. ಆದರೆ ದುರ್ದೈವದಿಂದ ಬಹಳ ಕಡೆಗೆ ಇವರೇನು ಸರ್ವೆಯರ್‌ಗಳನ್ನು ಪೋಡಿ ಪ್ರಕರಣಗಳಿಗೆ ಸಂಬಂಧ ಪಟ್ಟಂತೆ ಬೇರೆ ಬೇರೆ ಕಡೆಗೆ ಕಳುಹಿಸಿದಾಗ ತಿಂಗಳಿಗೆ ಮೂರು, ನಾಲ್ಕು , ಎರಡು, ಪ್ರಕರಣಗಳು ಬರುತ್ತವೆ ಎಂದು ಹೇಳುತ್ತಾರೆ ಮಾನ್ಯ ಶ್ರೀರಾಮರೆಡ್ಡಿಯವರೂ ಕೂಡ ಅವರನ್ನು ಭೇಟಿ ಮಾಡಿ ಬಂದಿದ್ದಾರೆ. ನಾನೂ ಕೂಡ ಐದು ಬಾರಿ ಅವರ ಪ್ರತಿನಿಧಿಗಳನ್ನೆಲ್ಲಾ ಭೇಟಿ ಮಾಡಿ ಬಂದಿದ್ದೇನೆ. ನಮ್ಮ ಕಾರ್ಮಿಕ ಸಚಿವರಾಗಿರತಕ್ಕಂಥ ಸನ್ಮಾನ್ಯ ತನ್ವೀರ್ ಶೇಠ್‌ರವರೂ ಕೂಡ ಹೋಗಿ ಅವರಿಗೆ ಸಾಂತ್ವತವನ್ನು ಹೇಳಿ ಅವರ ಬೇಡಿಕೆಗಳನ್ನು ತೆಗೆದುಕೊಂಡು ಬಂದಿದ್ದಾರೆ. ಅವರ ಮುಖ್ಯವಾಗಿರತಕ್ಕಂಥ ಬೇಡಿಕೆ . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಸಚಿವರೆ, ಒಂದ್ನಿಮಿಷ. ಗುತ್ತಿಗೆ ಸರ್ವೆದಾರರು ಸುಮಾರು ಹತ್ತು ದಿವಸಗಳಿಂದ ಧರಣಿ ಸತ್ಯಾಗ್ರಹ ಕುಳಿತಿದ್ದಾರೆ. ಪಾಪ, ಅವರ ಬಗ್ಗೆ ಸರ್ಕಾರ ಏನಾದರೂ ಮಾಡಿ ಆ ಧರಣಿಯಿಂದ ಅವರನ್ನು ಎಬ್ಬಿಸಲಿಕ್ಕೆ ಅವರಿಗೆ ಏನಾದರೂ ಒಂದು ವ್ಯವಸ್ಥೆ ಮಾಡಿ ಧರಣಿ ವಾಪಸ್ ತೆಗೆದುಕೊಳ್ಳುವಂತೆ ಮಾಡಿ. ಅವರ ಸಮಸ್ಯೆ ಏನಿದೆ ಅದನ್ನು ಪರಿಹಾರ ಮಾಡುತ್ತೇವೆಂದು ಹೇಳಿ ನಮಗೆ ಒಂದು ಆಶ್ವಾಸನೆಯನ್ನು ಕೊಟ್ಟು ಆ ಧರಣಿಯನ್ನು ವಾಪಸ್ ತೆಗೆದುಕೊಳ್ಳುವಂತೆ ಮಾಡಿ. ಪಾಪ, ಅವರು ಹತ್ತು ದಿವಸಗಳಿಂದ ಧರಣಿ ಕುಳಿತಿದ್ದಾರೆ. ಇಡೀ ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದಾರೆ. ಅವರು 300 ರೂಪಾಯಿಗಳಲ್ಲಿ ಜೀವನ ಮಾಡುವುದಕ್ಕೆ ಆಗುವುದಿಲ್ಲ. ಅವರಿಗೆ ತೊಂದರೆಯಾಗುತ್ತಿದೆ. ಅವರೇನೂ ಪರ್ಮನೆಂಟ್ ಮಾಡಿ ಎಂದು ಕೇಳುತ್ತಿಲ್ಲ. ಅವರಿಗೆ ಈಗ ಕೆಲಸ ಇಲ್ಲ. ಕೆಲಸ ಇಲ್ಲದೇ ಅವರಿಗೆ ಜೀವನ ಮಾಡುವುದು ಕಷ್ಟವಾಗಿದೆ. ಅದಕ್ಕೆ ಅವರಿಗೆ ಏನಾದರೂ ಒಂದು ವ್ಯವಸ್ಥೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಡಬೇಕು. ದಯವಿಟ್ಟು ಅವರು ಏನು ಹೋರಾಟ ನಡೆಸುತ್ತಿದ್ದಾರೆ ಅದನ್ನು ಅವರು ವಾಪಸ್ ತೆಗೆಯುವ ರೀತಿಯಲ್ಲಿ ಸರ್ಕಾರ ಮಧ್ಯ ಪ್ರವೇಶ ಮಾಡಬೇಕೆಂದು ತಮ್ಮ ಮುಖೇನ ನಾನು ಮಾನ್ಯ ಕಂದಾಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಉಪ ಸಭಾಧ್ಯಕ್ಷರೆ, ಅವರದ್ದೊಂದು ಪ್ರಾತಿನಿಧಿಕವಾದಂಥ ಸ್ವರೂಪದ ಸಂಘಟನೆ ಇಲ್ಲ. ಯಾವ ಯಾವ ಜಿಲ್ಲೆಗಳಿಗೆ ಸಂಬಂಧಪಟ್ಟಂಥ ಶಾಸಕರಿರುತ್ತಾರೆ ಅವರ ಬಳಿಗೆ ಇವರು ಗುಂಪಾಗಿ ಹೋಗಿ ಹೇಳಿಕೊಳ್ಳುತ್ತಾರೆ. ಅವರು ಕೇಳಿರತಕ್ಕಂಥದ್ದು ನಮ್ಮನ್ನು ಖಾಯಂ ಮಾಡಿ ಎಂದು. ಖಾಯಂ ಮಾಡುವುದಕ್ಕೆ ಸಾಧ್ಯತೆ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಕನಿಷ್ಠ ವೇತನವನ್ನಾದರೂ ಕೊಡುವಂತೆ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್: ಕನಿಷ್ಠ ವೇತನದ ಮೇಲೆ ಅವರನ್ನು ನೇಮಕಾತಿ ಮಾಡಿಕೊಂಡಿಲ್ಲ. ಅಲ್ಲಿ ಬಂದಿರತಕ್ಕಂಥ ಸಮಸ್ಯೆ ಗುತ್ತಿಗೆ ಆಧಾರದ ಮೇಲೆ ಕನಿಷ್ಠ ವೇತನದ ಮೇಲೆ ಅವರ ನೇಮಕಾಗಿ ಆಗಿಲ್ಲ. ಅವರಿಗೆ ತರಬೇತಿ ಕೊಟ್ಟನಂತರ ಯಾವ ಪ್ರಕರಣಗಳನ್ನು ನೀವು ಸರ್ವೆ ಮಾಡಿ ಬರುತ್ತೀರೋ ಆ ಪ್ರಕರಣಕ್ಕೆ 300 ರೂಪಾಯಿಗಳನ್ನು ನೀವು ತೆಗೆದುಕೊಳ್ಳಬಹುದು ಎನ್ನತಕ್ಕಂಥದ್ದು ಇದೆ. ಈಗ ಕೆಲವು ಕಡೆಗೆ, ಜಾಸ್ತಿ ಬೇಕಿರುವ ಕಡೆಗೆ ಕಮ್ಮಿ ಇದೆ. ಅವರು ಏನು ಹೇಳುತ್ತಾರೆ. ಪೋಡಿ ಪ್ರಕರಣ ಮೊದಲಾದಂಥವುಗಳು ಇರುತ್ತವೆ. ಅವುಗಳಿಗೆ ನೀವು ಬೇರೆ ಬೇರೆ ಜಿಲ್ಲೆಗಳಿಗೆ ಬೇರೆ ಬೇರೆ ತಾಲ್ಲೂಕುಗಳಿಗೆ ಹೋಗಬೇಕು ಎನ್ನತಕ್ಕಂಥದ್ದು ಹೋದಾಗ ಕೆಲವು ಸದಸ್ಯರು ಹೇಳುತ್ತಿದ್ದರೆ ನಮಗೆ ಎರಡೋ, ಮೂರೋ, ನಾಲ್ಕೋ ಪ್ರಕರಣಗಳು ಮಾತ್ರ ಒಂದು ತಿಂಗಳಿಗೆ ಬರುತ್ತವೆ ಎಂದು ಹೇಳುತ್ತಾರೆ. ಅದಕ್ಕಿಂತಲೂ ಹೆಚ್ಚಾಗಿ ಸನ್ಮಾನ್ಯ ಉಪ ಸಭಾಧ್ಯಕ್ಷರೆ, ಹಿಂದೆ ನೇಮಕಾತಿಯಾದ 2000 ಕ್ಕಿಂತಲೂ ಹೆಚ್ಚು ಸರ್ವೆಯರ್‌ಗಳು ಯಾರಿದ್ದಾರೆ ಅವರಲ್ಲಿ 1500, 1600 ಕ್ಕಿಂತಲೂ ಹೆಚ್ಚು ಮಂದಿ ಬರೇ ದಕ್ಷಿಣ ಕರ್ನಾಟಕದವರೇ ಇದ್ದಾರೆ. ಇವರ್‍ಯಾರೂ ಉತ್ತರ ಕರ್ನಾಟಕಕ್ಕೆ ಹೋಗಿ ಕೆಲಸ ಮಾಡುವುದಕ್ಕೆ ತಯಾರಿಲ್ಲ. ಇದು ಮೂಲಭೂತವಾಗಿರತಕ್ಕಂಥ ಪ್ರಶ್ನೆ. ಅವರು ಇಲ್ಲಿಯೇ ಕೆಲಸವನ್ನು ಮಾಡುತ್ತಿದ್ದರು. ಅವರು ಮನೆಯಲ್ಲಿದ್ದು ಕೆಲಸ ಮಾಡತಕ್ಕಂಥದ್ದು, ಊರಿಗೆ ಹತ್ತಿರವಾಗಿರತಕ್ಕಂಥ ಪ್ರದೇಶದಲ್ಲಿಯೇ ಕೆಲಸ ಮಾಡುತ್ತಿದ್ದರು. ಆದರೆ ಉತ್ತರ ಕರ್ನಾಟಕ್ಕೆ ಹೋಗಿ ಸರ್ವೆ ಮಾಡಬೇಕಾಗಿರುವಂಥ ಸಂದರ್ಭ ಬಂದಾಗ ಅವರನ್ನು ಇಲಾಖೆಯಲ್ಲಿ ವಿಲೀನಕರಿಸಿಕೊಂಡಾಗ ಅವರಿಗೆ ಬೇರೆ ಬೇರೆ ಜಾಗಗಳನ್ನು ತೋರಿಸಿದೆವು. ಆಗ ಇಲ್ಲದ ಒತ್ತಡಗಳನ್ನು ತಂದರು. ಬರೇ ಶಾಸಕರಿಂದ ಮಾತ್ರವಲ್ಲ; ಸಾರ್ವಜನಿಕರಿಂದ, ನಮ್ಮ ಪಕ್ಷಗಳ ಕಾರ್ಯಕರ್ತರುಗಳ ಮೂಲಕವಾಗಿ ಒತ್ತಡಗಳನ್ನು ತಂದರು. ಒಂದು ಸಲ ನಾನೇ ಅವರಿಗೆ ನಿಮ್ಮನ್ನು ಇಂಥ ಸ್ಥಳಕ್ಕೆ ಹಾಕಿದ್ದೇವೆ, ನೀವು ಅಲ್ಲಿ ಕೆಲಸ ಮಾಡಿ ಎಂದು ಹೇಳಿದೆ. ಆ ಕಾರಣಕ್ಕಾಗಿ ಈಗ ಅವರು ಅಲ್ಲಿಗೆ ಹೋಗಿ ಹೇಳುತ್ತಿದ್ದಾರೆ, ನಮಗೆ ಇಲ್ಲಿ ಎರಡು ಪ್ರಕರಣ, ಮೂರು ಪ್ರಕರಣಗಳು ಬರುತ್ತವೆ, 300 ರೂಪಾಯಿಯಂತೆ ಮೂರು ಪ್ರಕರಣ ಬಂದರೆ 900 ರೂಪಾಯಿಗಳು ಒಟ್ಟು ಬರುತ್ತದೆ, ನಾವು ಬದುಕುವುದು ಹೇಗೆ ಎಂದು ಕೇಳುತ್ತಾರೆ. ಇದುವರೆಗೆ ನಾನು ಈಗಾಗಲೇ ಐದು ಬಾರಿ ಅವರನ್ನು ಭೇಟಿಯಾಗಿದ್ದೇನೆ. ಐದು ಬಾರಿ ಅವರ ಹತ್ತಿರ ಚರ್ಚೆ ಮಾಡಿದ್ದೇನೆ. ಆದರೂ ಅವರು ಕಂಡವರ ಹತ್ತಿರ ಹೋಗಿ ಸರ್ವೆಯರ್ ಪ್ರಕರಣವನ್ನು ಬಗೆಹರಿಸಿ, ಸರ್ವೆಯರ್ ಪ್ರಕರಣವನ್ನು ಬಗೆಹರಿಸಿ ಎಂದು ಹೇಳಿದರೆ ಅವರನ್ನು ಖಾಯಂ ಮಾಡುವುದಕ್ಕೆ ಮಾತ್ರ ಸಾಧ್ಯವಿಲ್ಲ. ಈಗಾಗಲೇ ಅಧಿವೇಶನದ ಸಂದರ್ಭದಲ್ಲಿಯೇ ನಾನು ಒಂದು ಸಭೆಯನ್ನು ಕರೆದಿದ್ದೇನೆ. ಈ ರೀತಿಯಾಗಿ ಅವರು ಹೇಳುವಂಥದ್ದೇ ವಸ್ತುಸ್ಥಿತಿಯಾಗಿದ್ದರೆ ಅವರಿಗೆ ಕನಿಷ್ಠ 2000 ರೂಪಾಯಿ ಅಥವಾ ಮೂರು ಸಾವಿರ ರೂಪಾಯಿಗಳನ್ನಾದರೂ ಕೂಡ ಅವರ ಕೆಲಸಕ್ಕೆ, ಶ್ರಮಕ್ಕೆ ಪ್ರತಿಫಲ ಸಿಗುವಂಥ ರೀತಿಯಲ್ಲಿ ತಾಲ್ಲೂಕುಗಳಿಗೆ ಅವರನ್ನು ನೇಮಕಾತಿ ಮಾಡತಕ್ಕಂಥ ವಿಚಾರದಲ್ಲಿ ಸರ್ಕಾರ ಬದ್ಧವಾಗಿದೆ. ಅದಕ್ಕೆ ನಾವು ಮುಕ್ತ ಮನಸ್ಸಿನಲ್ಲಿದ್ದೇವೆ. ಆ ಸಭೆಯಾಗುವವರೆಗೂ ತಾವು ಇರಿ ಎಂದು ಹೇಳಿದರೆ, ಅವರು

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಸಚಿವರೆ, ತಾವು ಸ್ವಲ್ಪ ಯೀಲ್ಡ್ ಆಗಿ. ಇವತ್ತು ಏನಾಗಿದೆ ಎಂದರೆ ಅವರಿಗೆ ನಾವು ಲೈಸೆನ್ಸ್ ಎಂದು ಕೊಟ್ಟಿದ್ದೇವೆ. ಚಿಕ್ಕಮಗಳೂರು ಜಿಲ್ಲೆಯವರನ್ನು ಬೀದರ್ ಜಿಲ್ಲೆಗೆ, ಗುಲ್ಬರ್ಗ ಜಿಲ್ಲೆಗೆ ಹಾಕಿದ್ದೇವೆ. ಮಾನ್ಯ ಸಚಿವರು ಏನು ಹೇಳಿದರು, ಒಬ್ಬರಿಗೆ ಒಂದು ತಿಂಗಳಿಗೆ 200 ರಿಂದ 300 ರೂ. ಬರುತ್ತದೆ, ಒಬ್ಬರಿಗೆ ಒಂದೂವರೆ ಸಾವಿರ ರೂಪಾಯಿ ಕೂಡ ಆಗುವುದಿಲ್ಲ. ಅವರ ಜೀವನಕ್ಕೂ ಕೂಡ ತೊಂದರೆಯಾಗುತ್ತದೆ. ಅವರಿಗೆ ಲೈಸೆನ್ಸ್ ಕೊಟ್ಟಿದ್ದೀರಿ; ಅವರಿಗೆ ಕೆಲಸ ಕೊಡುವುದಕ್ಕೆ ಬೇಕಾದಷ್ಟು ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ರಿಜಿಸ್ಟರ್ ಆಗುತ್ತಿರುತ್ತದೆ. ಪೋಡಿ ಫೀಜ್ ಕಟ್ಟಿಸಿಕೊಳ್ಳುತ್ತಾರೆ. ಆ ಪೋಡಿ ಫೀಜ್‌ನಲ್ಲಾದರೂ ಕೊಡುವುದಕ್ಕೆ ಮಾನ್ಯ ಸಚಿವರು, ಸರ್ಕಾರದಿಂದ ಒಂದು ಆದೇಶವನ್ನು ಮಾಡಿದರೆ, ಅದರಿಂದ ಅವರು ಜೀವನ ಮಾಡಬಹುದು. ಅವರಿಗೆ ಲೈಸೆನ್ಸ್ ಕೊಟ್ಟಿದ್ದೇವೆ ಎಂದು ಹೇಳಿದರೆ, ಅದು ಒಂದರಿಂದ ಜೀವನ ಮಾಡುವುದಕ್ಕೆ ಕಷ್ಟವಾಗುತ್ತಿದೆ. ಆದುದರಿಂದ ಮಾನ್ಯ ಸಚಿವರು, ಅವರಿಗೆ ಖಾಯಂ ಮಾಡುವುದಕ್ಕೆ ಆಗದೆ ಇದ್ದರೂ ಒಂದು ಕನ್‌ಸಾಲಿಡೇಟೆಡ್ ಪೇ ಅನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಅವರ ಪರವಾಗಿ ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಇದು ನಿಜವಾಗಿ ಕೂಡ ಒಂದು ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಆಗತಕ್ಕಂಥ ಒಂದು ದೊಡ್ಡ ತೊಂದರೆ. ಇಲ್ಲಿ ನಿರುದ್ಯೋಗಿಗಳಾಗಿರತಕ್ಕಂಥ ಯುವಕರು ಇಂತಹ ಕನಿಷ್ಠವಾದಂತಹ ವೇತನವನ್ನು ತೆಗೆದುಕೊಂಡು ಬದುಕುವುದು ಹೇಗೆ ಎನ್ನುವುದು ಒಂದು ಪ್ರಶ್ನೆ ಇದ್ದರೆ, ಇನ್ನೊಂದು ಕಡೆ ನೂರಕ್ಕೆ 70ಕ್ಕಿಂತ ಹೆಚ್ಚು ಹಣವನ್ನು ಸರ್ಕಾರಿ ನೌಕರರ, ಶಾಸಕರ, ಸಚಿವರ ವೇತನ, ದೂರವಾಣಿ ಸಂಪರ್ಕ, ಪ್ರವಾಸ ಭತ್ಯೆ, ಸಂಬಳ ಸಾರಿಗೆಗೆ ಹೋಗಿ ಕೇವಲ 30ರಷ್ಟು ಇರುವಂತಹ ಹಣದಲ್ಲಿ ನಾವು ಅಭಿವೃದ್ಧಿಯನ್ನು ಮಾಡಬೇಕಾಗಿರತಕ್ಕಂಥ ಅನಿವಾರ್ಯವಾದಂತಹ ಸ್ಥಿತಿಯಲ್ಲಿದ್ದೇವೆ. ರಾಜ್ಯ ಸರ್ಕಾರದ ಸಂಪನ್ಮೂಲಗಳು ಬಹಳ ಇತಿಮಿತಿಯಾಗಿ ಇರತಕ್ಕಂಥದ್ದು. ಇದರಲ್ಲಿ ನಾವು ಅವರಿಗೆ ಈ ವಿಚಾರವನ್ನು ಹೇಳಿದ್ದೇವೆ. ಯಾವರೀತಿಯಾಗಿ ಅಸಮಾನತೆಯಿಂದ ಪ್ರಕ್ಷೋಭೆ ಉಂಟಾಗುತ್ತದೆ ಎನ್ನುವುದಕ್ಕೆ 2200 ಜನ ಸರ್ವೇಯರ್‌ಗಳನ್ನು ನೇಮಕ ಮಾಡಿದರೆ ಅವರಲ್ಲಿ 1500 ರಿಂದ 1800 ರವರೆಗೆ ಈ ಕಡೆ ಭಾಗದವರೇ ಅವರು ಹಾಸನ, ಚಿಕ್ಕಮಗಳೂರು ಅಥವಾ ದಕ್ಷಿಣ ಕರ್ನಾಟಕದ ಈ ಭಾಗದವರೇ ಇದ್ದರು. ಅವರು ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಹೋಗುವುದಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಅವರನ್ನು ಟ್ರಾನ್ಸ್‌ಫರ್ ಮಾಡಿ . . .

ಶ್ರೀ ಎಂ.ಪಿ. ಪ್ರಕಾಶ್: ಆ ಕಾರಣಕ್ಕಾಗಿ ವಿಲೀನಗೊಂಡ ನಂತರ ಅವರನ್ನು ನಾವು ಬೇರೆ ಬೇರೆ ತಾಲ್ಲೂಕುಗಳಿಗೆ ವರ್ಗಾವಣೆ ಮಾಡಿದ್ದೇವೆ. ಬೇರೆ ಬೇರೆ ತಾಲ್ಲೂಕುಗಳಿಗೆ ವರ್ಗ ಮಾಡಿದಂತಹ ಸಂದರ್ಭದಲ್ಲಿ ವಿವಾದಕ್ಕೆ ಸಂಬಂಧಪಟ್ಟಂತಹ ವಿಷಯ ಅವರಿಗೆ ಬಂದಾಗ ಅವರಿಗೆ 300 ರೂಪಾಯಿ ಸಿಗುತ್ತದೆ. ಈಗ ಗಣಿ ಇಲಾಖೆಗೆ ಸಂಬಂಧಪಟ್ಟಂತೆ ಭೂಗರ್ಭ ಅಂತರ್ಜಲ ವಿಚಾರದಲ್ಲಿ ನೀರನ್ನು ಕಂಡುಹಿಡಿಯಬೇಕಾದಾಗ ನಮ್ಮಲ್ಲಿ ಇರತಕ್ಕಂಥ ಜಿಯಾಲಜಿಸ್ಟ್‌ಗಳು ಜಿಲ್ಲೆಗೆ ಕೇವಲ ಇಬ್ಬರು ಮೂರು ಜನ ಇರುತ್ತಾರೆ. ಬೇಡಿಕೆಗಳು ಬಹಳ ಇರುತ್ತವೆ, ಆ ಕಾರಣಕ್ಕಾಗಿ ಖಾಸಗಿಯಾಗಿರತಕ್ಕಂಥ ಜಿಯಾಲಜಿಸ್ಟ್‌ಗಳನ್ನು, ವಾಟರ್ ಡಿವೈನರ್‌ಗಳನ್ನು ಉಪಯೋಗಿಸಬಹುದು ಎಂದು ಸರ್ಕಾರಿ ಆಜ್ಞೆ ಇದೆ. ವಾಟರ್ ಡಿವೈನರ್ಸ್ ಆಗಿ ಒಂದು ಕಡೆ ನೀರು ಬೀಳುತ್ತದೆ ಎಂದು ತೋರಿಸಿದರೆ, ಅದಕ್ಕೆ

400 ರೂಪಾಯಿಗಳನ್ನು ಕೊಡುತ್ತಾರೆ. ಅದಕ್ಕಿಂತ ಹೆಚ್ಚಿಗೆ ಕೊಡುವುದಕ್ಕೆ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಅವಕಾಶ ಇಲ್ಲ. ಹಾಗೆ ಇಲ್ಲಿ ಅವರಿಗೂ ಕೂಡ ಏನು ಹೇಳಿದ್ದೇವೆ ಎಂದರೆ ಎರಡು ವ್ಯಾಜ್ಯಕ್ಕೆ ಸಂಬಂಧಪಟ್ಟಂತಹ ಪ್ರಕರಣಗಳು ಇದ್ದರೆ ಅದರ ಸರ್ವೇ ಮಾಡಿದಂತಹ ಸಂದರ್ಭದಲ್ಲಿ 300 ರೂಪಾಯಿ ಅವರಿಗೆ ಸಿಗುತ್ತದೆ. ನಾವು ಅವರಿಗೆ ವೇತನದ ಮೇಲೆ ನೇಮಕಾತಿ ಮಾಡಿಲ್ಲ. ಆದರೆ ಸರ್ಕಾರದ ಸಂಪೂರ್ಣವಾದಂತಹ ಸಹಾನುಭೂತಿ ಇದೆ. ಇಬ್ಬರು ಮಾನ್ಯ ಸದಸ್ಯರುಗಳು ಏನು ಪ್ರಸ್ತಾಪ ಮಾಡಿದ್ದಾರೆ, ಅವರು ಹೇಳಿದ್ದು ನಿಜವೋ ಅಲ್ಲವೋ ಎನ್ನುವುದಕ್ಕಾಗಿಯೇ ಈ ಮೀಟಿಂಗ್ ಅನ್ನು ತೆಗೆದುಕೊಳ್ಳತಕ್ಕಂಥ ವಿಚಾರ ಮಾಡಿದ್ದೇನೆ. ಅವರಿಗೆ ಹೇಳಿದ್ದೇನೆ, ಈ ಮೀಟಿಂಗ್ ತೆಗೆದುಕೊಂಡು ಯಾರಿಗೆ ಕೇವಲ 2000 ರೂಪಾಯಿಗಳಿಗಿಂತ ಕಡಿಮೆ ಬರತಕ್ಕಂಥಾದ್ದು ಇದೆ, ಅಂತಹ ಪ್ರಕರಣಗಳ ವರದಿಯನ್ನು ನಾವು ತರಿಸಿಕೊಂಡು, ಹೆಚ್ಚು ಪ್ರಕರಣಗಳಲ್ಲಿ 10,000 ರೂ.ಗಳವರೆಗೆ ಬರತಕ್ಕಂಥ ಹಾಗೂ 5000 ರೂಪಾಯಿಗಳವರೆಗೆ ಬರತಕ್ಕಂಥ ಪ್ರಕರಣಗಳು ಇದ್ದರೆ ಅಥವಾ ನಿಮಗೆ ಅನುಕೂಲವಾಗುವಂತಹ ತಾಲ್ಲೂಕಿನಲ್ಲಿ ನಿಮ್ಮ ಮನೆಯಲ್ಲಿಯೇ ಇದ್ದು ಸರ್ವೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವುದಾದರೆ ಅದನ್ನು ಸೇರಿಸಿಕೊಟ್ಟರೆ . . .

ಶ್ರೀ ಸಿ.ಎಸ್. ಪುಟ್ಟೇಗೌಡ: ಮಾನ್ಯ ಸಚಿವರೆ, ತಾವು ಒಂದು ಕಡೆ ಸರ್ವೇಯರ್‌ರವರದ್ದು ಹೇಳುತ್ತೀರಿ. 10 ಗುಂಟೆ ಅಥವಾ 5 ಗುಂಟೆ ಇದ್ದು ಅವನು ಖಾತೆ ಮಾಡಿಕೊಳ್ಳಬೇಕೆಂದರೆ ಆಗ ಆ ರೈತನಿಗೆ 300 ರೂಪಾಯಿ ಭಾರವಾಗುತ್ತದೆ. ಅವನ ಪರಿಸ್ಥಿತಿ ಕೂಡ ನೋಡಿ. ಬೇಕಾದರೆ ಇವರನ್ನೆಲ್ಲಾ ಸರ್ವೆ ಮಾಡುವುದಕ್ಕೆ ಎಂಎಂಎಲ್ ಕಡೆ ಅಥವಾ ಮೈನ್ಸ್ ಲಾರಿಗಳು ಓಡಾಡುವ ಕಡೆ ಬಿಡಿ. ರೈತನ ಜಮೀನು 10 ಪೀಸ್ ಇರುತ್ತದೆ, 300 ರೂಪಾಯಿಯಂತೆ ಕೊಟ್ಟರೆ 3,000 ರೂಪಾಯಿ ಅವನು ಖಾತೆ ಮಾಡಿಕೊಳ್ಳಬೇಕಾದರೆ, ಅವನ ಅಪ್ಪನ ಜಮೀನನ್ನು ಅಣ್ಣತಮ್ಮಂದಿರು ಭಾಗ ಮಾಡಿ ಖಾತೆ ಮಾಡಿಸಿಕೊಳ್ಳಬೇಕು ಅಂದರೆ ಅದು ಬಹಳ ಭಾರವಾಗುತ್ತದೆ. ದಯಮಾಡಿ ನೀವು ಅದನ್ನು ರೈತರಿಗೆ ಕಡಿಮೆ ಮಾಡಬೇಕು. ನೀವು ಇವರಿಗೆ ಕೆಲಸ ಕೊಡುವುದರ ಬಗ್ಗೆ ಒಂದು ಕಡೆ ಯೋಚನೆ ಮಾಡಬೇಕು, ಮಾಡಿ, ಇದು ರೈತರಿಗೆ ಕೂಡ ಹೊರೆಯಾಗುತ್ತದೆ. 300 ರೂಪಾಯಿ ಅಂದರೆ ಅವರ ಅಪ್ಪನ ಜಮೀನನ್ನು ಮಕ್ಕಳು ಹಂಚಿಕೊಳ್ಳಬೇಕಾದರೆ, ಅದು 10 ಪೀಸ್ ಇದ್ದು, ಈ ಭಾಗದಲ್ಲೆಲ್ಲಾ 30 ಗುಂಟೆ, 50 ಗುಂಟೆ ಇಬ್ಬಿಬ್ಬರು ಹಂಚಿಕೊಳ್ಳಬೇಕು ಎಂದರೆ 300 ರೂಪಾಯಿಯಂತೆ ಮಾಡಿದರೆ ಅವರು 3000 ಸಾವಿರ ರೂಪಾಯಿ ಎಲ್ಲಿಂದ ತರುತ್ತಾರೆ? ನಮ್ಮ ಕಡೆ ಜನ ಬಹಳ ನಿವೇದನೆ ಮಾಡಿಕೊಳ್ಳುತ್ತಾರೆ. ಇದು ಸರ್ಕಾರದಿಂದ ದೊಡ್ಡ ಹೊರೆ, ನಮ್ಮ ಅಪ್ಪನ ಆಸ್ತಿಯನ್ನು ನಾವು ಹಂಚಿಕೊಳ್ಳುವುದಕ್ಕೆ 300 ರೂಪಾಯಿಯನ್ನು ಈ ಸರ್ವೆಯರ್‌ಗೆ ಎಲ್ಲಿಂದ ತಂದು ಕೊಡೋಣ ಎಂದು. ದಯಮಾಡಿ ಇದರ ಬಗ್ಗೆ ಕೂಡ ಆಲೋಚನೆ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್: ಅವನಿಗೆ ಎರಡು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಅಲ್ಲ. ಕನಿಷ್ಠ ಅವರಿಗೆ 2000 ರೂಪಾಯಿ ಸಿಗುವಂತಹ ರೀತಿಯಲ್ಲಿ ಯೋಚನೆ ಮಾಡುತ್ತೇವೆಂದು ಹೇಳಿದೆ. ಅವರನ್ನು ಪರ್ಮನೆಂಟ್ ಮಾಡಬೇಕೆಂದು ನೀವು ಹೇಳುವುದಾದರೆ, ಈಗ ಸುಪ್ರೀಂ ಕೋರ್ಟ್‌ನಲ್ಲಿ ಆ ಪ್ರಕರಣ ಇದೆ.

ಶ್ರೀ ಎಸ್.ಎಸ್. ಪಾಟೀಲ್: ಇದು ನನಗೆ ತಿಳಿದಮಟ್ಟಿಗೆ ಮತ್ತು ಹಿಂದೆ ಕೂಡ ನನಗೆ ಗೊತ್ತಿದೆ. ನಾನು ಅಲ್ಲಿದ್ದಾಗ ಮಾತನಾಡಿದ್ದೇನೆ. ಹಿಂದೆ ನಾವು ಕ್ಯಾಬಿನೆಟ್‌ನಲ್ಲಿ ಇದ್ದಾಗ ಕೂಡ ಹೇಳಿದೆ. ಅವರು ಪ್ರೈವೇಟ್ ಪ್ರಾಕ್ಟೀಷನರ್ಸ್, ಆ ಉದ್ದೇಶಕ್ಕೆ ಮಾಡಿದ್ದು. ಅವರು ಪ್ರೈವೇಟ್ ಪ್ರಾಕ್ಟೀಷನರ್ಸ್ ಆದ್ದರಿಂದ ನಿಜವಾಗಿ ಅಲ್ಲಿಯವರನ್ನು ಇಲ್ಲಿಗೆ ಬಂದು ವರ್ಕ್ ಮಾಡಿ ಎಂದು ಹೇಳುವುದಕ್ಕೆ ನಿಮಗೆ ಬರುವುದಿಲ್ಲ. ಅವರು ಅಲ್ಲಲ್ಲೇ ಇದ್ದು, ಅದೇ ಜಾಗದಲ್ಲಿ ಇದ್ದು ಪ್ರೈವೇಟ್ ಪ್ರಾಕ್ಟೀಸ್ ಮಾಡಲಿ ಎನ್ನುವ ದೃಷ್ಟಿಯಿಂದ ಅವರನ್ನು ಮಾಡಿದ್ದು. ಆದರೆ ಅವರನ್ನು ಈಗ ಸರ್ಕಾರಿ ನೌಕರರನ್ನಾಗಿ ಮಾಡಿ ಎಂದರೆ ಅದು ತಪ್ಪು ಆಗುತ್ತದೆ. ಪ್ರೈವೇಟ್ ಪ್ರಾಕ್ಟೀಷನರ್ಸ್ ಅವರು; ಬೇಕಾದರೆ 10 ಜನರನ್ನು ನೇಮಕ ಮಾಡಿಕೊಳ್ಳಲಿ, ಆದರೆ ರೈತರಿಗೆ ಅನುಕೂಲವಾಗಲಿ ಎಂದು ಮಾಡಿದ್ದು. ಅವರು ನೌಕರದಾರರು ಅಲ್ಲ, ನನಗೆ ತಿಳಿದಮಟ್ಟಿಗೆ ಪ್ರೈವೇಟ್ ಪ್ರಾಕ್ಟೀಷನರ್ಸ್ ಎಂದು ಮಾಡಿದ್ದು. ಆ ಯೋಜನೆ ನನಗೆ ಗೊತ್ತಿದೆ, ಮಾನ್ಯ ಸೋಮಶೇಖರ್ ಅವರು ಇದ್ದಾಗ ಇದನ್ನು ತಂದರು. ಜಮೀನು ಅಳತೆ ಮಾಡಬೇಕು, ನಮ್ಮಲ್ಲಿ ಸರ್ಕಾರ ಸರ್ವೇಯರ್ ಸಿಗುವುದಿಲ್ಲವೆಂದು ಹಳ್ಳಿಗಳಲ್ಲಿ ಅಳೆಯುವವರು ಏನು ಇರುತ್ತಾರೆ, ಅದರ ಬದಲು ಇವರಿಗೆ ಲೈಸೆನ್ಸ್ ಕೊಟ್ಟು ಪ್ರೈವೇಟ್ ಪ್ರಾಕ್ಟೀಸ್ ಮಾಡಲಿ ಎಂದು ಮಾಡಿದರು.

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಹಿಂದಿನ ಸರ್ಕಾರ ರದ್ದು ಮಾಡಿ, ಈಗಿನ ಸಮ್ಮಿಶ್ರ ಸರ್ಕಾರ ಲೈಸೆನ್ಸ್ ಕೊಟ್ಟಿತು. ಆದರೆ ಅವರಿಗೆ ಈಗ ಏನಾಗಿದೆ ಎಂದರೆ ಹೊಟ್ಟೆ ತುಂಬುತ್ತಾ ಇಲ್ಲ. ಬಿಜಾಪುರಕ್ಕೆ ಒಬ್ಬರನ್ನು, ಗುಲ್ಬರ್ಗಾಕ್ಕೆ ಒಬ್ಬರನ್ನು, ಬೀದರ್‌ಗೆ ಒಬ್ಬರನ್ನು ಹಾಕಿದ್ದಾರೆ. ಆದ್ದರಿಂದ ಅವರಿಗೆ ಏನಾದರೂ ಕನ್ಸಾಲಿಡೇಟೆಡ್ ಪೇ ಅನ್ನು ಕೊಡುವುದಕ್ಕೆ ಮಾನ್ಯ ಸಚಿವರು ಮನಸ್ಸು ಮಾಡಬೇಕು. ಅವರನ್ನು ಖಾಯಂ ಮಾಡುವುದಕ್ಕೆ ಆಗದೆ ಇದ್ದರೂ ಈ ರೀತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಾವು ಏನಾದರೂ ಮಾಡಿ, ಅವರು ಧರಣಿ ಮಾಡುತ್ತಿದ್ದಾರೆ ಅದನ್ನು ಅಂತ್ಯಗೊಳಿಸುವುದಕ್ಕೆ ಸರ್ಕಾರ . . .

ಶ್ರೀ ಎಂ.ಪಿ. ಪ್ರಕಾಶ್: ನೋಡಿ ಬೇಡಿಕೆಗಳನ್ನು ಯಾವುದು ಪರಿಹರಿಸಬೇಕು ಎಂದು ವಿಚಾರ ಇದ್ದು, ನಮಗೂ ಕೂಡ ಅವರ ಬಗ್ಗೆ ಸಹಾನುಭೂತಿ ಇದೆ. ಈಗ ಅವರು ಖಾಯಂ ಮಾಡಿ ಎಂದು ಕೇಳುತ್ತಾರೆ, ಆದರೆ ಖಾಯಂ ಮಾಡುವುದಕ್ಕಾಗುವುದಿಲ್ಲ. ಧರಣಿ ಅಂತ್ಯ ಮಾಡಿ ಅಂದರೆ . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರನ್ನು ಖಾಯಂ ಮಾಡಿ ಎಂದು ಹೇಳತಕ್ಕಂಥ ವಿಚಾರದಲ್ಲಿ ನಾವೇನೂ ಅವರ ಪರವಾಗಿ ಮಾತನಾಡುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ನನ್ನಲ್ಲಿ ಅವರ ಬೇಡಿಕೆ ಕಾಪಿ ಇದೆ, ಅದನ್ನು ಕೊಡಲೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರು ಬೇಡಿಕೆ ಇಟ್ಟಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: 'ಭೂಮಾಪಕರ ಗುತ್ತಿಗೆ ಆಧಾರ ಅಥವಾ ಕನಿಷ್ಠ ವೇತನ ಇರಿಸುವ ಕುರಿತು ಬೇಡಿಕೆಗಳು.'

ಶ್ರೀ ಎಂ.ಪಿ. ಪ್ರಕಾಶ್: ಹೌದು, ಖಾಯಂ ಮಾಡಿ ಎಂದೂ ಕೂಡ ಬೇಡಿಕೆ ಇಟ್ಟಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಖಾಯಂ ಮಾಡಿ ಎಂದು ಬೇಡಿಕೆ ಇಟ್ಟಿದ್ದಾರೆ. ಆದರೆ ನೀವು ಖಾಯಂ ಮಾಡಿ ಎಂದು ಕೇಳುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಅವರ ಮಾತನ್ನೇ ತಾವು ಕೇಳುತ್ತೀರಿ, ನಾನು ಐದು ಬಾರಿ ಅವರನ್ನು ಕಂಡಿದ್ದೇನೆ ಅಂದರೆ ಏಕೆ ತಾವು ಮನವೊಲಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ತಮಗೆ ಕಂಡಿಲ್ಲವೆಂದು ಹೇಳುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಮತ್ತೆ ಏಕೆ ಅವರು ಬಿಡಬಾರದು, ಮನವೊಲಿಸುವುದಕ್ಕೆ ಅವರಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಐದು ಬಾರಿ ಅವರ ತಂಡಗಳನ್ನು ನಾನು ಕಂಡಿದ್ದೇನೆ. ಮಾನ್ಯ ತನ್ವೀರ್ ಶೇಠ್, ಅವರೂ ಕೂಡ ಹೋಗಿ ಅವರ ಮನವಿಯನ್ನು ತೆಗೆದುಕೊಂಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನೂ ಕೂಡ ತನ್ವೀರ್ ಸೇಠ್ ಅವರ ಜೊತೆಯಲ್ಲಿ ಹೋಗಿದ್ದೆ. ಆಯಿತು, ಅವರು ಹೋರಾಟ ಮಾಡುತ್ತಿದ್ದಾರೆ, ಬೆಳಿಗ್ಗೆ ಕರೆಸಿಬಿಟ್ಟು ಮಾತನಾಡಿ, ಧರಣಿ ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿ ಪ್ರಸ್ತಾಪ ಮಾಡಿದೆ.

ಶ್ರೀ ಎಂ.ಪಿ. ಪ್ರಕಾಶ್: ತಾವು ಅವರಿಗಾಗಿ ಪ್ರಸ್ತಾಪ ಮಾಡಿದ್ದೀರಿ. ಇಲ್ಲಿ ಕೂಡ ಮಾಡಿದ್ದೀರಿ. ನಾಳೆ ಬೆಳಗ್ಗೆ 9.00 ಗಂಟೆಗೆ ಅವರನ್ನು ಕರೆಯಿರಿ, ನಾನು ಮಾತನಾಡುತ್ತೇನೆ ಎಂದು ಕೂಡ ತಮ್ಮ ಎದುರಿಗೆ ನಾನು ಹೇಳಿದ್ದೇನೆ. ಈಗ ಸರ್ಕಾರ ಈ ವಿಚಾರದಲ್ಲಿ ಮಾತನಾಡುವುದಕ್ಕೆ ಹಿಂದುಮುಂದು ನೋಡತಕ್ಕಂಥಾದ್ದು ಏನಿಲ್ಲ. ನಮಗೆ ಅವರ ಬಗ್ಗೆ ಸಹಾನುಭೂತಿ ಇದೆ. ಆದರೆ ನೀವು ಹೇಳಿದಂತೆ ಖಾಯಂ ಮಾಡಬೇಕು . . . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ಖಾಯಂ ಮಾಡಿ ಎಂದು ಹೇಳಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಬೇರೆಯವರು ಅವರನ್ನು ಪರ್ಮನೆಂಟ್ ಮಾಡಿ ಎಂದು ಹೇಳಿದರಲ್ಲಾ, ಈಗ ಹರಿಹರದ ಕಾರ್ಮಿಕರು ವರ್ಷಾನುಗಟ್ಟಲೆ ಸತ್ಯಾಗ್ರಹ ಮಾಡಿದರು. ಏನು ಮಾಡುವುದಕ್ಕಾಗುತ್ತದೆ? ಈಗ ಸರ್ವೆಯರ್ ಕೊರತೆ ಇದೆ. ನೋಡಿ, ಈ ರೀತಿಯಲ್ಲಿ ಆಗಲೇ ಮಾನ್ಯ ಎಸ್.ಎಸ್. ಪಾಟೀಲ್‌ರವರು ಹೇಳಿದಂತೆ ಖಾಸಗಿ ಸರ್ವೆಯರ್‌ಗಳು ಅವರು. ಅವರು ಸರ್ಕಾರಿ ನೌಕರರಲ್ಲ. ಗುತ್ತಿಗೆ ಆಧಾರದಲ್ಲಿ ವೇತನವನ್ನು ನೀಡುವ ರೀತಿಯಲ್ಲಿ ಕೂಡ ಅವರನ್ನು ನಾವು ತೆಗೆದುಕೊಂಡಿಲ್ಲ. ಅವರು ಈ ರೀತಿಯಾದಂತಹ ಚಳುವಳಿ ಏನು ಮಾಡುತ್ತಿದ್ದಾರೆ ಅದು ಸಾಧುವಾದುದಲ್ಲ. ಆದರೆ ಮಾನವೀಯ ದೃಷ್ಟಿಯಿಂದ ನಾವು ಅವರಿಗೆ ಪ್ರತಿಕ್ರಿಯೆ ಕೊಡತಕ್ಕಂಥಾದ್ದು ನಮ್ಮ ಸರ್ಕಾರದ ಆದ್ಯಕರ್ತವ್ಯ. ಆದರೆ ಸರ್ಕಾರಕ್ಕೆ ತನ್ನದೇ ಆದಂತಹ ಸಂಪನ್ಮೂಲದ ಇತಿಮಿತಿಗಳಿರುತ್ತವೆ.

ಉಪಾಧ್ಯಕ್ಷರು: ಈಗ ವಿರೋಧ ಪಕ್ಷದವರು ಯಾರೂ ಇಲ್ಲ. ತಾವು ಉತ್ತರ ಕೊಡುತ್ತಿದ್ದೀರಿ. ಸಮಸ್ಯೆ ಸ್ವಲ್ಪ ಹಾಗೇ ಉಳಿದ ಹಾಗೆ ಕಾಣುತ್ತದೆ. ಆದ್ದರಿಂದ ಅವರನ್ನು ಕರೆಸಿ ಮಾತನಾಡತಕ್ಕಂಥ ವ್ಯವಸ್ಥೆ ಮಾಡಿದರೆ, ಸರಿ ಎಂದೆನಿಸುತ್ತದೆ. ಆದ್ದರಿಂದ ಒಂದು 10 ನಿಮಿಷ ಬೇಕಾದರೆ ಹೌಸ್ ಅಡ್ಜರ್ನ್ ಮಾಡೋಣ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಉಪಾಧ್ಯಕ್ಷರೆ, ನಾಳೆ ಬೆಳಿಗ್ಗೆ ಅವರನ್ನು ಕರೆಸಿ, . . . ಅವರು ಧರಣಿ ಕುಳಿತಿದ್ದಾರೆ . . .

ಉಪಾಧ್ಯಕ್ಷರು: ಈಗ ಮಾತನಾಡಲಿ, ಅವರನ್ನು ಕರೆಸಿ . . .

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ತಾವು ಇರಲಿಲ್ಲ, ಅದಕ್ಕೇ ಮಾನ್ಯ ಅಧ್ಯಕ್ಷರು ಹೋಗಿದ್ದಾರೆ.

ಉಪಾಧ್ಯಕ್ಷರು: ಅದಕ್ಕೆ ಅವರನ್ನು ಕರೆಸುವುದಕ್ಕೆ, ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸದನವು ಸಂಜೆ 6.30 ಗಂಟೆಗೆ ಮುಂದೂಡಲ್ಪಟ್ಟು ಪುನಃ 10 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು)

(ಸದನವು ಪುನಃ 8 ಗಂಟೆಗೆ ಸಮಾವೇಶಗೊಂಡಿತು)

[**ಅಧ್ಯಕ್ಷರು (ಶ್ರೀ ಕೃಷ್ಣ) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು**]

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 10–00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 8 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 29ನೇ ಜುಲೈ 2005ರ ಶುಕ್ರವಾರದಂದು ಬೆಳಿಗ್ಗೆ 10–00 ಗಂಟೆಗೆ ಸೇರಲು ನಿಶ್ಚಯಿಸಿತು)